# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038








ಸಂಪುಟ:02 • ಸಂಚಿಕೆ: 78 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 19.09.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 78 • PRGI No:KARKAN/2023/88055 • VIJAYANAGARA • 19.09.2024 • Thursday • Page:04 • Rs:2


## ಉತ್ತಮ ಆರೋಗ್ಯಕ್ಕೆ ನೈರ್ಮಲ್ಯ ಅಗತ್ಯ

### ಜಿಪಂ ಸಿಇಓ ಎನ್.ಮಹ್ಮದ್ ಅಲಿ ಅಕ್ರಮ ಷಾ ಚಾಲನೆ | ಸ್ವಚ್ಛತಾ ಹೀ ಸೇವಾ ಆಂದೋಲನ
### ಅ.2ರವರೆಗೆ ಸ್ವಚ್ಛತಾ ಜಾಗೃತಿ | ಶಾಲಾ ಕಾಲೇಜ್, ಕಲ್ಯಾಣಿಗಳು, ದೇವಸ್ಥಾನ ಶುಚಿಗೊಳಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಸ್ವಚ್ಛತಾ ಹೀ ಸೇವಾ ಪಾಕ್ಷಿಕ–2024ರ ಸ್ವಚ್ಛತಾ–ಹಿ–ಸೇವಾ ಆಂದೋಲನ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ ಷಾಹ ಅವರು ಸೆ.18ರಂದು ಚಾಲನೆ ನೀಡಿದರು.

ಜಿಲ್ಲಾ ಪಂಚಾಯತ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮತ್ತು ಸ್ವಚ್ಛ ಭಾರತ್ ಮಿಷನ್ ಸಹಯೋಗದಲ್ಲಿ ಹೊಸಪೇಟೆ ತಾಲ್ಲೂಕಿನ ಐತಿಹಾಸಿಕ ವಿಶ್ವಖ್ಯಾತಿ ಹಂಪಿಯ ವಿಜಯವಿಠಲ ದೇವಸ್ಥಾನದ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಇಓ ಅವರು, ಗ್ರಾಮೀಣ ಪ್ರದೇಶದಲ್ಲಿ ಜನರ ಆರೋಗ್ಯ ಉತ್ತಮವಾಗಿರಬೇಕಾದರೆ ನೈರ್ಮಲ್ಯ ಅಗತ್ಯವಾಗಿದೆ. ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮ ಬೀರದಂತೆ ಸ್ವಚ್ಚತೆಯ ಕುರಿತು ಜಾಗೃತರಾಗಬೇಕಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿ ಹಾಗೂ ಗ್ರಾಮಗಳಲ್ಲಿ ಎಲ್ಲರ ಭಾಗವಹಿಸುವಿಕೆಯೊಂದಿಗೆ ಸ್ವಚ್ಚತಾ ಹೀ ಸೇವಾ ಪಾಕ್ಷೀಕ–2024 ಆಂದೋಲನ ಕಾರ್ಯಕ್ರಮವನ್ನು ಅಕ್ಟೋಬರ್ 2ರವರೆಗೆ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕೋರಿದರು.



ಹೊಸಪೇಟೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿಕಾಂತ್ ಡಿ. ಅವರು ಸ್ವಚ್ಚತಾ ಹೀ–ಸೇವಾ ಪಾಕ್ಷಿಕ–2024ರ ಆಂದೋಲನದ ಪ್ರತಿಜ್ಞಾ ವಿದಿ ಬೋಧಿಸಿ ಮಾತನಾಡಿ, ಎಲ್ಲಾ ಗ್ರಾಮಗಳಲ್ಲಿ ಹೆಚ್ಚು ಕಸ ಸಂಗ್ರಹವಾಗುವ ಸ್ಥಳಗಳು, ಕಲ್ಯಾಣಿ ಪ್ರದೇಶ, ಶಾಲಾ–ಕಾಲೇಜು ಆವರಣ, ಸರ್ಕಾರಿ ಕಚೇರಿಯ ಆವರಣ, ಬಸ್ ನಿಲ್ದಾಣ, ದೇವಸ್ಥಾನ ಹಾಗೂ ಗ್ರಾಮ ಪಂಚಾಯತಿ ಕಟ್ಟಡ ಮತ್ತು ಗ್ರಂಥಾಲಯ ಕಟ್ಟಡಗಳ ಮುಂಭಾಗಗಳಲ್ಲಿ ಹೆಚ್ಚಿನ ರೀತಿಯಲ್ಲಿ ಸ್ವಚ್ಛತೆ ಕುರಿತು ಅರಿವು ಮೂಡಿಸುವುದು ಹಾಗೂ ಸಮುದಾಯಗಳ ಶೌಚಾಲಯ ಬಳಕೆ ಮಾಡಲು ಉತ್ತೇಜಿಸುವಂತಹ ಕಾರ್ಯಕ್ರಮವನ್ನು ನಿರಂತರವಾಗಿ ಅಕ್ಟೋಬರ್ 2ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಅಶೋಕ ಜಿ.ತೋಟದ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ದೀಪಾ, ಜಿಲ್ಲಾ ಪಂಚಾಯತನ ಜೆ.ಜೆ.ಎಂನ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರಾದ ಮಹೇಶ್ವರಿ, ಎನ್ಆರ್ಎಲ್ಎಂಡಿಪಿಎಂ ಪ್ರಸನ್ನ, ಜಿಲ್ಲಾ ವ್ಯವಸ್ಥಾಪಕರಾದ ಕಲಾವತಿ, ಬುಕ್ಕಸಾಗರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರಾಜೇಶ್ವರಿ ಹಾಗೂ ಸದಸ್ಯರು, ತಾಪಂ ಹೊಸಪೇಟೆ ನರೇಗಾ ವಿಭಾಗದ ಹೆಚ್ ನಾಗರಾಜ, ಎನ್.ಆರ್.ಎಲ್.ಎಮ್. ಸಂಜೀವಿನಿ ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರಾದ ಕೊಟ್ರೇಶ್, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್ ಅಧಿಕಾರಿಗಳು ಹಾಗೂ ಸಿಬ್ಬಂದಿ, ನರೇಗಾ ಕೂಲಿ ಕಾರ್ಮಿಕರು, ಸ್ವಚ್ಛವಾಹಿನಿ ಚಾಲಕರು, ಮಹಿಳಾ ಒಕ್ಕೂಟದ ಸದಸ್ಯರು ಹಾಗೂ ಎಲ್ಲಾ ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

**ಮೈಕ್ರೋ ನ್ಯೂಸ್**

## ವಿಕಲಚೇತನರಿಗೆ ರಾಜ್ಯ ಮಟ್ಟದ ಪ್ರಶಸ್ತಿಗೆ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಕಲಚೇತನರ ದಿನಾಚರಣೆಯ ಅಂಗವಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ವಿಕಲಚೇತನರ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡಿದ ಸಂಸ್ಥೆಗಳಿಗೆ, ವಿಶೇಷ ಶಿಕ್ಷಕರಿಗೆ ಮತ್ತು ವೈಯಕ್ತಿಕ ಪ್ರಶಸ್ತಿಗಳನ್ನು ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅಕ್ಟೋಬರ್ 15 ಕೊನೆಯ ದಿನಾಂಕವಾಗಿದ್ದು, ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ವಿಜಯನಗರ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ ತಾಲ್ಲೂಕಿನ ಎಮ್ಆರ್ಡಬ್ಲ್ಯು ಮೊ: 994525991, ಹರಪನಹಳ್ಳಿ ತಾಲ್ಲೂಕಿನ ಎಮ್ಆರ್ಡಬ್ಲ್ಯು ಮೊ: 9901182525, ಕೂಡ್ಲಿಗಿ ತಾಲ್ಲೂಕಿನ ಎಮ್ಆರ್ಡಬ್ಲ್ಯು ಮೊ: 217626361, ಹೂವಿನಹಡಗಲಿ ತಾಲ್ಲೂಕಿನ ಎಮ್ಆರ್ಡಬ್ಲ್ಯು ಮೊ: 9900890403, ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಎಮ್ಆರ್ ಡಬ್ಲ್ಯು ಮೊ: 9741185924, ಕೊಟ್ಟೂರು ತಾಲ್ಲೂಕಿನ ಎಮ್ಆರ್ಡಬ್ಲ್ಯು ಮೊ: 8296859012ಗೆ ಅಥವಾ ಸಂಡೂರು ರಸ್ತೆಯಲ್ಲಿರುವ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕಾರ್ಯಾಲಯಕ್ಕೆ ಕಚೇರಿಯ ಅವಧಿಯಲ್ಲಿ ಸಂಪರ್ಕಿಸಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ.

## ವಾಹನ ಚಾಲಕಿ ಗಾಯತ್ರಿಗೆ ಜಿಲ್ಲಾಡಳಿತ ಸನ್ಮಾನ



**ಹಂಪಿ ಟೈಮ್ಸ್ ಕೊಪ್ಪಳ**

ಪ್ರತಿದಿನ ಘನತ್ಯಾಜ್ಯ ವಿಲೇವಾರಿ ಮಾಡುವಲ್ಲಿ ಗ್ರಾಮ ಪಂಚಾಯತ್‌ನಲ್ಲಿ ಅತ್ಯುತ್ತಮವಾಗಿ ವಾಹನ ಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಜಿರಾಳ ಗ್ರಾಮ ಪಂಚಾಯತ್‌ನ ಗಾಯತ್ರಿ ಅವರಿಗೆ ಜಿಲ್ಲಾಡಳಿತದಿಂದ ಸೆ.17ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 77ನೇ ಕಲ್ಯಾಣ ಕರ್ನಾಟಕ ಉತ್ಸವ ದಿನದ ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಪ್ರತಿದಿನ ಘನತ್ಯಾಜ್ಯ ವಿಲೇವಾರಿ ಮಾಡುವ ಟ್ರಾಕ್ಟರ್ ನಡೆಸಿಕೊಂಡೇ ಜಿಲ್ಲಾ ಕ್ರೀಡಾಂಗಣಕ್ಕೆ ಆಗಮಿಸಿದ ಗಾಯತ್ರಿ ಅವರಿಗೆ ವೇದಿಕೆಗೆ ಆಹ್ವಾನಿಸಿ, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವಶಿವರಾಜ ತಂಗಡಗಿ, ಸಂಸದ ಕೆ.ರಾಜಶೇಖರ ಹಿಟ್ನಾಳ್, ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಮತ್ತು ಹೇಮಲತಾ ನಾಯಕ ಸನ್ಮಾನಿಸಿ ಗೌರವಿಸಿದರು.

## ಶಿಕ್ಷಕರ ಖಾತೆಗೆ ವೇತನ ಪಾವತಿ

### ಹೊಸದಾಗಿ ನೇಮಕಗೊಂಡ ಶಿಕ್ಷಕರ ಕುಟುಂಬಗಳಲ್ಲಿ ಹಬ್ಬದ ಸಂಭ್ರಮ
### ಹಂಪಿ ಟೈಮ್ಸ್ ವರದಿಗೆ ಸ್ಪಂದಿಸಿದ ಶಿಕ್ಷಣ ಇಲಾಖೆ | ಯುವ ಶಿಕ್ಷಕರಲ್ಲಿ ಹರ್ಷ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಕಳೆದ 10 ತಿಂಗಳಿಂದ ವೇತನವಿಲ್ಲದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ 6 ರಿಂದ 8ನೇ ತರಗತಿಗೆ ನೇಮಕಗೊಂಡ ಅನೇಕ ಹೊಸ ಶಿಕ್ಷಕರ ಖಾತೆಗೆ ಬುಧವಾರ ವೇತನ ಪಾವತಿಯಾಗಿದ್ದು, ಬ್ಯಾಂಕ್ ಬ್ಯಾಲೆನ್ಸ್ ಮೆಸೇಜ್ ನೋಡಿ ಶಿಕ್ಷಕರು ಸೇರಿದಂತೆ ಅವರ ಕುಟುಂಬವರ್ಗ ಹರ್ಷಗೊಂಡಿದ್ದಾರೆ.

ಶಿಕ್ಷಕರ ಕೈಸೇರದ ಹರ್ಷದ ವೇತನ ಶೀರ್ಷಿಕೆಯಡಿ ಹಂಪಿ ಟೈಮ್ಸ್ ಸೆ.17ರ ಮಂಗಳವಾರ ವರದಿ ಪ್ರಕಟಿಸಿತ್ತು. ಹಂಪಿ ಟೈಮ್ಸ್ ಕಳಕಳಿಯ ವರದಿಗೆ ಸ್ಪಂದಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಬುಧವಾರ ಶಿಕ್ಷಕರ ಬ್ಯಾಂಕ್ ಖಾತೆಗೆ ವೇತನ ಪಾವತಿಯಾಗುವಂತೆ ಕ್ರಮವಹಿಸಿರುವುದಕ್ಕೆ ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಶಿಕ್ಷಕರು ಮೊದಲ ಬಾರಿಗೆ ಸರ್ಕಾರಿ ವೇತನ ಪಡೆದ ದಿನವೇ ತಮ್ಮ ಪೋಷಕರಿಗೆ, ಕುಟುಂಬ ವರ್ಗಕ್ಕೆ, ಸ್ನೇಹಿತರಿಗೆ ಸಿಹಿ ತಿನಿಸಿ, ಪಾಲಕರಿಗೆ ಹೊಸ ಬಟ್ಟೆಗಳನ್ನು ಕೊಡಿಸಿ, ದೇವರಿಗೆ ದೀಪ ಬೆಳಗಿ ಸಂಭ್ರಮಪಟ್ಟಿದ್ದಾರೆ. 10 ತಿಂಗಳಿಂದ ವೇತನಕ್ಕಾಗಿ ಕಾಯುತ್ತಿದ್ದೆವು. ಇಂದು ವೇತನ ಬ್ಯಾಂಕ್ ಖಾತೆಗೆ ವೇತನ ಪಾವತಿಯಾಗಿರುವುದು ತಿಳಿದು ಖುಷಿ ತಂದಿದೆ ಎಂದ ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿಗೆ ಕೃತಜ್ಞತೆಗಳನ್ನು ತಿಳಿಸಿದ್ದಾರೆ.



ಹಂಪಿ ಟೈಮ್ಸ್

**ಶಿಕ್ಷಕರ ಕೈಸೇರದ ಹರ್ಷದ ವೇತನ**

**ಮೇಷ್ಟ್ರುಗಳ ಸ್ಯಾಲರಿ ಪಾವತಿಗೆ ಆಯುಕ್ತರು, ಜಿಲ್ಲಾ ಉಪನಿರ್ದೇಶಕರಿಂದ ಮೇ ತಿಂಗಳಲ್ಲೆ ಆದೇಶ**
**10 ತಿಂಗಳ ಸಂಬಳಕ್ಕಾಗಿ ಕಾಯುತ್ತಿರುವ 6 ರಿಂದ 8ನೇ ತರಗತಿಗೆ ನೇಮಕವಾದ ಹೊಸ ಟೀಚರ್ಸ್**
**ಕುಟುಂಬ ಪೋಷಣೆಗೆ ಪರದಾಟ | ಸಾಲದ ಸುಳಿಗೆ, ಮಾನಸಿಕ ಒತ್ತಡಕ್ಕೆ ಸಿಲುಕಿದ ಗುರುಗಳು**

■ ಹಂಪಿ ಟೈಮ್ಸ್ ಹೊಸಪೇಟೆ

ಅರ್ಹತೆ ಆಧರಿಸಿ ಹೊಸದಾಗಿ 6 ರಿಂದ 8ನೇ ತರಗತಿಗೆ ನೇಮಕಗೊಂಡ ಅನೇಕ ಶಿಕ್ಷಕರ ಪೈಕಿ 20ಕ್ಕೂ ಅಧಿಕ ಶಿಕ್ಷಕರು ಹತ್ತು ತಿಂಗಳಿಂದ ಬಾರದ ವೇತನಕ್ಕಾಗಿ ನಿತ್ಯ ಬ್ಯಾಂಕ್ ಬ್ಯಾಲೆನ್ಸ್ ಚೆಕ್‌ಮಾಡಿಕೊಳ್ಳುವಂತಾಗಿದೆ. ವೇತನ ಬಾರದ್ದರಿಂದ ಪೋಷಕರ ಆರೋಗ್ಯ, ನಿತ್ಯದ ಜೀವನ ನಿರ್ವಹಣೆಗೆ ಸಾಲದ ಸುಳಿಗೆ ಸಿಲುಕಿ ಮಾನಸಿಕ ಒತ್ತಡಕ್ಕೊಳಗಾಗುತ್ತಿದ್ದಾರೆ. ಹಗಲಿರಳು ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿರುವ ಶಿಕ್ಷಕರ ಸಂಕಷ್ಟ ಕೇಳುವವರು ಇಲ್ಲವೇ? ಎನ್ನುವ ಪ್ರಶ್ನೆ ಜನಸಾಮಾನ್ಯರನ್ನೂ ಕಾಡುತ್ತಿದೆ.

ಆಧುನಿಕ ವೇಗದ ತಂತ್ರಜ್ಞಾನದ ನಡುವೆ ಮಾಹಿತಿ ಹಂಚಿಕೊಳ್ಳಲು ಹತ್ತಾರು ಅವಕಾಶಗಳಿದ್ದರೂ, ವಿಸಿ ಮೂಲಕ ಮೀಟಿಂಗ್‌ಗಳು ನಡೆಸಿ ಅನೇಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲಾಗುತ್ತಿದ್ದರೂ, ಶಿಕ್ಷಣ ಇಲಾಖೆಯ ಅಧಿಕಾರಿಗಳು ತಾಂತ್ರಿಕ ಸಮಸ್ಯೆ ಎಂದೇಳುವ ನೆಪ ಸರಿಯೇ ಎಂಬ ಪ್ರಶ್ನೆ ಶಿಕ್ಷರಲ್ಲದೇ ಜನಸಾಮಾನ್ಯರನ್ನು ಕಾಡುತ್ತಿದೆ. ಶಿಕ್ಷಕರ ಬದುಕನ್ನು ಶಿಕ್ಷಣ ಇಲಾಖೆಯ ಮೇಲಾಧಿಕಾರಿಗಳೇ ಅರ್ಥೈಸಿಕೊಳ್ಳದಿರುವುದು ವಿಪರ್ಯಾಸ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 2022–23ನೇ ಸಾಲಿನಲ್ಲಿ 6 ರಿಂದ 8ನೇ ತರಗತಿಯಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಾತಿಯಾದ 56 ಶಿಕ್ಷಕರಿಗೆ ಪ್ರಥಮ ವೇತನ ಅರ್ಹತಾ ಪ್ರಮಾಣ ಪತ್ರ ದೊಂದಿಗೆ ಕರ್ತವ್ಯಕ್ಕೆ ಹಾಜರಾದ ದಿನದಿಂದ ಪರಿಷ್ಕೃತ ವೇತನ ಶ್ರೇಣಿಯನ್ನು ನೀಡುವಂತೆ 17 ಮೇ 2024 ರಂದು ಶಾಲಾ ಶಿಕ್ಷಣ ಆಯುಕ್ತರಾದ ಬಿ.ಬಿ.ಕಾವೇರಿ ಅವರು ಜಿಲ್ಲಾ ಉಪನಿರ್ದೇಶಕರಿಗೆ ವೇತನ ಪಾವತಿಗೆ ಕ್ರಮವಹಿಸಲು ಲಿಖಿತವಾಗಿ ಸೂಚಿಸಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯ ವಿಜಯನಗರ ಜಿಲ್ಲೆ ಉಪನಿರ್ದೇಶಕರು ಸಂಬಂಧಿಸಿದ ಹಗರಿಬೊಮ್ಮನಹಳ್ಳಿ ಕ್ಷೇತ್ರ ಶಿಕ್ಷಣಾಧಿಕಾರಿಗೆ 24 ಮೇ 2024ರಂದೇ ಲಿಖಿತ ನಿರ್ದೇಶನ ನೀಡಿದ್ದಾರೆ. ನೇಮಕಗೊಂಡ 56 ಶಿಕ್ಷಕರ ಪೈಕಿ ಅನೇಕರಿಗೆ ವೇತನ ಬಿಡುಗಡೆಗೊಳಿಸಲಾಗಿದೆ ಆದರೆ 20ಕ್ಕೂ ಅಧಿಕ ಶಿಕ್ಷಕರ ಖಾತೆಗೆ ಇನ್ನೂ ವೇತನ ಪಾವತಿಯಾಗದಿರುವುದು ಹಲವು ಅನುಮಾನಗಳಿಗೆ ಎಡೆಮಾಡಿದ್ದು, ಶಿಕ್ಷಕರ ವಲಯದಲ್ಲಿ ಇದೀಗ ಚರ್ಚೆಗೆ ಗ್ರಾಸವಾಗಿದೆ.

**ಜೀವನ ನಿರ್ವಹಣೆಗೆ ಪರದಾಟ:**

ಆರ್ಥಿಕ ಸಂಕಷ್ಟದ ನಡುವೆ ಶಿಕ್ಷಣ ಪೂರೈಸಿ, ಅರ್ಹತೆ ಆಧಾರದ ಮೇಲೆ ಶಿಕ್ಷಕರಾಗಿ ಆಯ್ಕೆಗೊಂಡ ಶಿಕ್ಷಕರ ಕುಟುಂಬದಲ್ಲಿ ನೆಮ್ಮದಿಯ ನಿಟ್ಟುಸಿರಿನ ಬದಲಿಗೆ ಆರ್ಥಿಕ ಸಂಕಷ್ಟ ಮತ್ತಷ್ಟು ಎದುರಾಗಿದೆ. ಮೊದಲ ತಿಂಗಳು ವೇತನ ಬರುತ್ತದೆ ಎಂಬ ಕಾತುರದಿಂದ ಕ್ಯಾಲೆಂಡರ್ ತಿರುಗಿಸಿದ ಹೊಸ ಶಿಕ್ಷಕರಿಗೆ ವೇತನ ಪಾವತಿಗೆ ಅಗತ್ಯವಿರುವ ದಾಖಲೆ, ಮಾಹಿತಿ ಒದಗಿಸುವ ಸೂಚನೆಗಳೇ ಬಂದವೇ ಹೊರತು ಇದೂವರೆಗೂ ಅನೇಕರಿಗೆ ವೇತನ ಕೈಸೇರಲಿಲ್ಲ. ನವೆಂಬರ್ 2023 ರಿಂದ ಶಿಕ್ಷಕರು ಮಕ್ಕಳ ಉಜ್ವಲ ಭವಿಷ್ಯಕ್ಕೆ ತಮ್ಮನ್ನು ಬದುಕನ್ನೇ ಸವೆಸಿಕೊಳ್ಳುತ್ತಾ, ಕ್ಯಾಲೆಂಡರ್ ಹಾಳೆ ತಿರುಗಿಸುತ್ತಾ ಯಾರ ಮುಂದೆಯೂ ಹೇಳಿಕೊಳ್ಳಲಾಗದೆ ತಮ್ಮೊಳಗೆ ವೇದನೆ ಅನುಭವಿಸುತ್ತಿದ್ದಾರೆ. ಹತ್ತವರಿಗೆ ಮೊದಲ ವೇತನ ನೀಡಬೇಕೆಂಬ ಯುವ ಶಿಕ್ಷಕರ ಕನಸಿನ ಖುಷಿಯೂ ಇನ್ನೂ ನನಸಾಗಿಲ್ಲ. ಹತ್ತವರ ಆರೋಗ್ಯ, ಸಹೋದರ, ಸಹೋದರಿಯರ ಶೈಕ್ಷಣಿಕ ವೆಚ್ಚ, ಜೀವನ ನಿರ್ವಹಣೆಗೆ ಪರದಾಡುವಂತಾಗಿದೆ. ಇನ್ನೂ ಹೊಸದಾಗಿ ನೇಮಕಗೊಂಡ ಶಿಕ್ಷಕಿಯರ ಆರ್ಥಿಕ ಪರಿಸ್ಥಿಯತಿಯಂತು ಹೇಳತೀರದ್ದಾಗಿದೆ. ಹೊಸ ಶಿಕ್ಷಕರ ಆರ್ಥಿಕ ಸಂಕಷ್ಟವನ್ನು ನೋಡಲಾಗದ ಹಿರಿಯ ಶಿಕ್ಷಕರು ಅಯ್ಯೋ ಇದೆಂಥಾ ಸ್ಥಿತಿ ಇಲಾಖೆಗೆ ಎನ್ನುತ್ತಿದ್ದಾರೆ.

ಅಕ್ಕರೆಯಿಂದ ಮಕ್ಕಳನ್ನು ಸನ್ಮಾರ್ಗದತ್ತ ಕರೆದೊಯ್ಯುತ್ತಿರುವ ಶಿಕ್ಷಕರಿಗೆ ವೇತನ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಸಕಾಲದೊಳಗೆ ಒದಗಿಸಿದರೆ ಮಕ್ಕಳಲ್ಲಿ ಶೈಕ್ಷಣಿಕ ಪ್ರಗತಿ ಸಾಧಿಸಲು ಸಾಧ್ಯ ಎಂಬುದನ್ನು ಜನಪ್ರತಿನಿಧಿಗಳು, ಮೇಲಾಧಿಕಾರಿಗಳು ಅರಿಯಬೇಕು ಎನ್ನುತ್ತಾರೆ ಶಿಕ್ಷಣ ಪ್ರೇಮಿಗಳು. ಹಿರಿಯ ಅಧಿಕಾರಿಗಳು ಇನ್ನಾದರೂ ಎಚ್ಚೆತ್ತುಕೊಂಡು ಶಿಕ್ಷಕರ ಬ್ಯಾಂಕ್ ಖಾತೆಗೆ ವೇತನ ಪಾವತಿಯಾಗುವಂತೆ ಕ್ರಮವಹಿಸುವರೆ ಕಾದುನೋಡಬೇಕು.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ 6ರಿಂದ 8ನೇ ತರಗತಿ ನೂತನವಾಗಿ ನೇಮಕಗೊಂಡ ಅನೇಕ ಶಿಕ್ಷಕರ ವೇತನ ಇನ್ನೂ ಆಗಿಲ್ಲ. ಈಗಾಗಲೇ ಅನೇಕ ಬಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಮತ್ತು ನಿರ್ದೇಶಕರೊಂದಿಗೆ ಚರ್ಚಿಸಿದ್ದೇನೆ. ಆಧುನಿಕ ತಂತ್ರಜ್ಞಾನ ಕಾಲಘಟ್ಟದಲ್ಲೂ ತಾಂತ್ರಿಕ ಸಮಸ್ಯೆ ಹೇಳುವುದು ಸರಿಯಲ್ಲ. ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ, ಶಿಕ್ಷಕರಿಗೆ ನಿರಂತರವಾಗಿ ಪ್ರತಿ ತಿಂಗಳು ವೇತನ ನೀಡಬೇಕೆಂದು ಕೋರಿದ್ದೇವೆ. ತಡವಾದರೆ ಆಯುಕ್ತರ ಗಮನಕ್ಕೂ ತಂದು ಮುಂದಿನ ಹೋರಾಟಕ್ಕೆ ಸಜ್ಜಾಗುತ್ತೇವೆ.
– ಪಿ.ಮುರಳೀಧರ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ 6ರಿಂದ8 ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘ. ಬೆಂಗಳೂರು.

ಕೆಜಿಐಡಿ, ಎಚ್ಆರ್ಎಂಎಸ್‌ಗೆ ಶಿಕ್ಷಕರು ಅಗತ್ಯ ಮಾಹಿತಿ ಒದಗಿಸುವಲ್ಲಿ ಮತ್ತು ತಾಂತ್ರಿಕ ತೊಂದರೆಯಿಂದಾಗಿ ಆರು ಶಿಕ್ಷಕರಿಗೆ ವೇತನ ಆಗಿಲ್ಲ. 48 ಶಿಕ್ಷಕರಿಗೆ ವೇತನ ಮಾಡಲಾಗಿದೆ. ಇನ್ನೆರೆಡು ದಿನಗಳಲ್ಲಿ ಇನ್ನುಳಿದವರಿಗೂ ವೇತನ ಪಾವತಿಗೆ ಕ್ರಮವಹಿಸಲಾಗುವುದು.
–ಮಲ್ಲೇಶ ಬೇವೂರು, ಕ್ಷೇತ್ರ ಶಿಕ್ಷಣಾಧಿಕಾರಿ, ಹ.ಬೊ.ಹಳ್ಳಿ.

17 Sep 2024 - Page 1-powerd by webgauge

HAMPI TIMES IMPACT

ಕ್ಷೇತ್ರ ಶಿಕ್ಷಣಾಧಿಕಾರಿ ಮೈಲೇಶ ಬೇವೂರು ಅವರು ಹಂಪಿ ಟೈಮ್ಸ್ ಪತ್ರಿಕೆಯೊಂದಿಗೆ ಮಾತನಾಡಿ, ಕೆಲ ತಾಂತ್ರಿಕ ಸಮಸ್ಯೆಯಿಂದ ಶಿಕ್ಷಕರ ವೇತನ ಪಾವತಿಯಲ್ಲಿ ವಿಳಂಭವಾಗಿತ್ತು. ಈಗ ಒಂದಿಬ್ಬರಿಗೆ ಹೊರತುಪಡಿಸಿ ಎಲ್ಲರಿಗೂ ವೇತನ ಮಾಡಲಾಗಿದೆ. ತಾಂತ್ರಿಕ ತೊಂದರೆ ಇರುವು ದನ್ನು ಬೆಂಗಳೂರಿನ ಕಾರ್ಯಾಲಯಕ್ಕೆ ಕಳುಹಿಸಲಾಗಿದೆ ಶೀಘ್ರದಲ್ಲೆ ಅವರಿಗೂ ವೇತನ ಪಾವತಿ ಯಾಗಲಿದೆ ಎಂದು ತಿಳಿಸಿದರು.

## ಬೆಳೆ ಸ್ಪರ್ಧೆಯಲ್ಲಿ ವಿಜೇತ ರೈತ ಮದ್ದಾನಪ್ಪಗೆ ಸನ್ಮಾನ



■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಡಳಿತದಿಂದ ಸೆ.17ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 77ನೇ ಕಲ್ಯಾಣ ಕರ್ನಾಟಕ ಉತ್ಸವ ದಿನದ ಸಮಾರಂಭದಲ್ಲಿ ಕೊಪ್ಪಳ ಜಿಲ್ಲೆಯ ಪ್ರಗತಿಪರ ರೈತರಾದ ಮುದಕಪ್ಪ ಮತ್ತು ಮದ್ದಾನಪ್ಪ ಅವರಿಗೆ ಸನ್ಮಾನಿಸಲಾಯಿತು.

2023–24ನೇ ಸಾಲಿನ ಕೃಷಿ ಪ್ರಶಸ್ತಿ ಕಾರ್ಯಕ್ರಮದಡಿ ರಾಜ್ಯಮಟ್ಟದ ಮುಂಗಾರು ಹಂಗಾಮಿನ ಭತ್ತ ಬೆಳೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಗಂಗಾವತಿ ತಾಲೂಕಿನ ಕೋಟಯ್ಯಕ್ಯಾಂಪನ ಮುದುಕಪ್ಪ ತಂದೆ ಮರಿಯಪ್ಪ ಅವರಿಗೆ ಹಾಗೂ 2023–24ನೇ ಸಾಲಿನ ಕೃಷಿ ಪ್ರಶಸ್ತಿ ಕಾರ್ಯಕ್ರಮದಡಿ ರಾಜ್ಯಮಟ್ಟದ ಮುಂಗಾರು ಹಂಗಾಮಿನ ಮುಸುಕಿನ ಜೋಳ ಬೆಳೆ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದ ಗಂಗಾವತಿ ತಾಲೂಕಿನ ಗಡ್ಡಿ ಗ್ರಾಮದ ಮದ್ದಾನಪ್ಪ ತಂದೆ ನಾಗಪ್ಪ ಅವರಿಗೆ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ, ಸಂಸದರಾದ ಕೆ.ರಾಜಶೇಖರ ಹಿಟ್ನಾಳ್, ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ ಮತ್ತು ಹೇಮಲತಾ ನಾಯಕ ಅವರು ಪ್ರಶಸ್ತಿ ನೀಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್. ಅರಸಿದ್ದಿ, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯ ಚತುರ್ವೇದಿ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತಕುಮಾರ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್ ಹಾಗೂ ಇನ್ನಿತರರು ಇದ್ದರು.

## ರಸ್ತೆಗೆ ಸಾಹಸಸಿಂಹ ಡಾ.ವಿಷ್ಣುವರ್ಧನ ನಾಮಕರಣ

### ನಗರಸಭೆ ಸದಸ್ಯ, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ತಾರಳ್ಳಿ ಜಂಬುನಾಥ ಉದ್ಘಾಟನೆ | ಅಭಿಮಾನಿಗಳಲ್ಲಿ ಸಂತಸ

■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಮಹಾತ್ಮಗಾಂಧಿ ರಸ್ತೆಯಲ್ಲಿ ದಿನಪತ್ರಿಕೆ ವಿತರಕರು ಡಾ.ವಿಷ್ಣುವರ್ಧನ ಸೇನಾ ಸಮಿತಿ ಪದಾಧಿಕಾರಿಗಳು, ಅಭಿಮಾನಿಗಳು ಬುಧವಾರ ಸಾಹಸ ಸಿಂಹ ಡಾ.ವಿಷ್ಣುವರ್ಧನ ಅವರ 74ನೇ ಹುಟ್ಟು ಹಬ್ಬವನ್ನು ಕೇಕ್ ಕತ್ತರಿಸಿ ಸಿಹಿ ಹಂಚಿ, ಪೋಸ್ಟರ್ ಬಿಡುಗಡೆಗೊಳಿಸುವ ಮೂಲಕ ಸಂಭ್ರಮಿಸಿದರು.

ನಗರದ ಎಂಪಿ ಪ್ರಕಾಶನಗರದುದ್ದಕ್ಕೂ ಹಾದುಹೋಗಿರುವ ರಸ್ತೆಗೆ ಡಾ. ವಿಷ್ಣವರ್ಧನ ರಸ್ತೆ ಎಂದು ನಾಮಕರಣ ಗೊಳಿಸಿದ ನಾಮಫಲಕವನ್ನು ನಗರಸಭೆ ಸದಸ್ಯ ತಾರಳ್ಳಿ ಜಂಬುನಾಥ ಉದ್ಘಾಟಿಸಿ ಮಾತನಾಡಿದರು. ಡಾ.ವಿಷ್ಣುವರ್ಧನ ಅವರ ಅಪಾರ ಅಭಿಮಾನಿಗಳ ಬಹುದಿನದ ಕನಸು ಇಂದು ನನಸಾಗಿದೆ. ರಸ್ತೆಯುದ್ದಕ್ಕೂ ಇರುವ ಅಂಗಡಿ ಮುಂಗಟ್ಟುಗಳ ಮಾಲೀಕರು ತಮ್ಮ ಮಳಿಗೆಯ ನಾಮಫಲಕಗಳಲ್ಲಿ ಡಾ.ವಿಷ್ಣವರ್ದನ ರಸ್ತೆ ಎಂದು ನಮೂದಿಸಿಕೊಂಡು ಅವರ ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಬೇಕು ಎಂದರು.





ಸೇನಾ ಸಮಿತಿಯ ಅಧ್ಯಕ್ಷ ಬಿ.ಪಂಪಾಪತಿ ಮಾತನಾಡಿ, ನಗರದ ರಸ್ತೆ ಹಾಗೂ ವೃತ್ತವೊಂದಕ್ಕೆ ಕನ್ನಡದ ಮೇರುನಟ ಡಾ.ವಿಷ್ಣುವರ್ಧನ ಅವರ ಹೆಸರು ನಾಮಕರಣ ಮಾಡಬೇಕೆಂದು ಅನೇಕ ವರ್ಷಗಳಿಂದ ನಗರಸಭೆಗೆ ಮನವಿ ಸಲ್ಲಿಸುತ್ತಾ ಬಂದಿದ್ದೆವು. ಕಳೆದ ವರ್ಷ ಜಿಲ್ಲಾಧಿಕಾರಿಗಳಿಗೂ ಮನವಿ ಸಲ್ಲಿಸಲಾಗಿತ್ತು. ಈ ಹಿಂದೆ ನಗರಸಭೆಯಲ್ಲಿ ನಗರದ ಅನಂತಶಯನಗುಡಿಯಿಂದ ಎಂ.ಪಿ.ಪ್ರಕಾಶನಗರದ ಮೂಲಕ ಬಳ್ಳಾರಿ ರಸ್ತೆ ಸೇರುವವರೆಗಿನ ಮುಖ್ಯರಸ್ತೆಗೆ ಡಾ.ವಿಷ್ಣುವರ್ಧನ ರಸ್ತೆ ನಾಮಕರಣಕ್ಕೆ ಸದಸ್ಯರು ಒಪ್ಪಿಗೆ ಸೂಚಿಸಿದ್ದರು. ಡಾ.ವಿಷ್ಣುವರ್ಧನ ಹುಟ್ಟುಹಬ್ಬದಂದೆ ರಸ್ತೆ ಎಂದು ನಾಮಫಲಕ ನೆಟ್ಟು ಉದ್ಘಾಟನೆ ಮಾಡಿರುವುದು ಅಭಿಮಾನಿಗಳಲ್ಲಿ ಹರ್ಷ ತಂದಿದೆ. ಕನ್ನಡದ ಹಿರಿಯ ಹಾಗೂ ಶಿಸ್ತಿನ ಸಿಪಾಯಿ ಹೆಸರನ್ನು ನಗರದ ರಸ್ತೆ ವೃತ್ತಕ್ಕೆ ಇಡಲು ಅವಕಾಶ ಕಲ್ಪಿಸಿದ ನಗರಸಭೆ ಸದಸ್ಯರಿಗೆ ಹಾಗೂ ಜಿಲ್ಲಾಡಳಿತಕ್ಕೆ ಅಭಿಮಾನಿಗಳು ಕೃತಜ್ಞರಾಗಿದ್ದೇವೆ ಎಂದರು.

ನಗರಸಭೆ ಸದಸ್ಯೆ ಕಮಲಮ್ಮ, ವಿಶ್ರಾಂತ ಪ್ರಾಧ್ಯಾಪಕ ಡಾ.ಚಂದ್ರಶೇಖರ ಶಾಸ್ತ್ರಿ, ಶಾರದ ಬುಕ್‌ಸ್ಟಾಲ್ ಮಾಲೀಕರಾದ ಕೆ.ಹನುಮಂತಪ್ಪ, ಬಿ.ಚಂದ್ರಶೇಖರ್, ಶ್ರೀಕಾಂತ, ವೀರೇಶ ಇತರರು ಇದ್ದರು.




# ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಭೆ




**ಹಂಪಿ ಟೈಮ್ಸ್ ಕೊಪ್ಪಳ**

ಗ್ಯಾರಂಟಿ ಯೋಜನೆಗಳ ಜಾರಿಯ ಉದ್ದೇಶ ಅರಿತು ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರಾದ ರೆಡ್ಡಿ ಶ್ರೀನಿವಾಸ ಅವರು ಹೇಳಿದರು.

ಕುಷ್ಟಗಿ ತಾಲೂಕು ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಸೆ.18ರಂದು ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುಷ್ಟಗಿ ತಾಲೂಕುಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳಿಂದಾಗಿ ಸಮಾಜದಲ್ಲಿನ ಕಡುಬಡವರಿಗೆ ಸಾಕಷ್ಟು ಅನುಕೂಲವಾಗಿದೆ. ಮುಖ್ಯವಾಗಿ ಹಸಿವಿನಿಂದ ಬಳಲುವಂತಹ ಜನರಿಗೆ, ಸೌಲಭ್ಯಗಳಿಂದ ವಂಚಿತವಾಗಿರುವಂತಹ ಜನರಿಗೆ ಈ ಯೋಜನೆಗಳ ಜಾರಿಯಿಂದಾಗಿ ಸಾಕಷ್ಟು ಅನುಕೂಲವಾಗಿದೆ. ಇದನ್ನು ಅಧಿಕಾರಿಗಳು ಮತ್ತು ಸಿಬ್ಬಂದಿ ಅರಿಯಬೇಕು. ಕಡುಬಡ ವರ್ಗದ ಜನರ ಬಗ್ಗೆ ಅಂತಃಕರಣ ಭಾವನೆ ಬೆಳೆಸಿಕೊಂಡು ಕಾರ್ಯನಿರ್ವಹಿಸಿದಲ್ಲಿ ಸೌಲಭ್ಯಗಳಿಂದ ವಂಚಿತರಾದ ಜನರ ಬಾಳಿಗೆ ಯೋಜನೆಗಳು ಸಹಕಾರಿಯಾಗಿ ಜನರ ಬಾಳಲ್ಲಿ ಬದಲಾವಣೆ ಕಾಣುವುದು ಎಂದು ತಿಳಿಸಿದರು.

ಕುಷ್ಟಗಿ ತಾಲೂಕಿನಲ್ಲಿ ಅನ್ನಭಾಗ್ಯ, ಗೃಹಲಕ್ಷ್ಮಿ, ಶಕ್ತಿ, ಗೃಹಜ್ಯೋತಿ, ಯುವನಿಧಿ ಯೋಜನೆಗಳ ಪ್ರಗತಿಯ ಬಗ್ಗೆ ಇದೆ ವೇಳೆ ಸಮಗ್ರ ಪರಿಶೀಲನೆ ನಡೆಸಲಾಯಿತು. ಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಕುಷ್ಟಗಿ ತಾಲೂಕು ಘಟಕದ ಅಧ್ಯಕ್ಷರು, ಸದಸ್ಯರು ಮತ್ತು ತಾಲೂಕುಮಟ್ಟದ ವಿವಿಧ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಇದ್ದರು.

# ಶಿಕ್ಷಕರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಕೊಪ್ಪಳ ತಾಲ್ಲೂಕಿನ ಹಿಟ್ನಾಳ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಆಂಗ್ಲ ಮಾಧ್ಯಮ ವಸತಿ ಶಾಲೆಯಲ್ಲಿ 2024-25 ಸಾಲಿಗೆ ಬೋಧನೆಗಾಗಿ ಅನುಭವವುಳ್ಳ ಅತಿಥಿ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದೆ.

ಹುದ್ದೆಗಳ ವಿವರ : ಬಿ.ಎ,ಬಿ.ಎಡ್ ವಿದ್ಯಾರ್ಹತೆ ಹೊಂದಿದ ಕನಿಷ್ಠ 2 ವರ್ಷಗಳ ಅನುಭವ ಹೊಂದಿದ ಕನ್ನಡ ಶಿಕ್ಷಕ-01, ಆಂಗ್ಲ ಶಿಕ್ಷಕ-01, ಉರ್ದು ಶಿಕ್ಷಕ-01, ಗಣಿತ ಶಿಕ್ಷಕ(ಬಿಎಸ್ಸಿ,ಬಿ. ಎಡ್)-01 ಹಾಗೂ ಸಮಾಜ ವಿಜ್ಞಾನ ಶಿಕ್ಷಕ-01 ಹುದ್ದೆಗಳಿಗೆ ಸೆಪ್ಟಂಬರ್ 20ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಕೊಪ್ಪಳ ತಾಲ್ಲೂಕಿನ ಲಿಂಗದಳ್ಳಿ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗೆ ಖುದ್ದಾಗಿ ಬಂದು ಅಥವಾ ಇಮೇಲ್ nmmmdrskoppal@gmail.com ಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9036326839 ಗೆ ಸಂಪರ್ಕಿಸಿ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**- ಜಾಹೀರಾತು ವ್ಯವಸ್ಥಾಪಕರು.**

# ಕ್ಯಾಸ್ಪಿಯನ್ ಕಡಲಿನಲ್ಲಿ ಕೆಸರು ಬೆಂಕಿ ತೈಲ

ಜಗತ್ತಿನ ಪ್ರತಿ ಭೂಭಾಗವೂ ಪ್ರಾಕೃತಿಕವಾಗಿ ಹಲವು ಪರಿಯ ವಿಸ್ಮಯ ತೊಂದರೆ ಚೆಲುವು ಫಾಯದೆಗಳಿಗೆ ಜನ್ಮಕೊಟ್ಟಿದೆ. ಪ್ಯಾಲೆಸ್ತೇನ್ ಜೋರ್ಡಾನ್ ಭಾಗದಲ್ಲಿರುವ ಮೃತಸಮುದ್ರ ಹಾಗೂ ರಷ್ಯಾ-ಅಜರಬೈಜಾನ್-ಇರಾನ್ ದೇಶಗಳಿಗೆ ಲಗತ್ತಾಗಿರುವ ಕ್ಯಾಸ್ಪಿಯನ್ ಕಡಲು ಇಂತಹವು. ಕಡಲೇ ಸುತ್ತುವರಿದು ನೆಲವನ್ನು ಬಂಧಿಸುವ ದೇಶಗಳು ಭೂಮಂಡಲದಲ್ಲಿ ಸಾಕಷ್ಟಿವೆ. ಆದರೆ ಇಲ್ಲಿ ದೇಶಗಳೇ ಆವರಿಸಿಕೊಂಡು ಕಡಲನ್ನು ಬಂಧಿಯಾಗಿಸಿವೆ. ಕ್ಯಾಸ್ಪಿಯನ್‌ನಲ್ಲಿ ಹಡಗು ಚಲಿಸುತ್ತವೆ. ಕಿನಾರೆ ಹಂಚಿಕೊಂಡಿರುವ ದೇಶಗಳಿಗೆ ಹೋಗಿಬರುತ್ತವೆ. ಆದರೆ ಇತರೆ ಕಡಲುಗಳಿಗೆ ಸಂಪರ್ಕವಿಲ್ಲ.

ವಿಮಾನ ಅಝುರ್‌ಬೈಜಾನಿನ ಬಾಕು ಶಹರಿನ ಮೇಲಿಳಿವಾಗ ನಡುರಾತ್ರಿ. ನಗರದ ದೀಪಗಳು ನೀರಹಾಳೆಯಂತಿದ್ದ ಕ್ಯಾಸ್ಪಿಯನ್ ಕಡಲಲ್ಲಿ ಬೆಳಕಿನ ಕಂಬಗಳಂತೆ ಚಾಚಿಕೊಂಡಿದ್ದವು. ಬಾಕುವಿನಲ್ಲಿದ್ದಷ್ಟೂ ದಿನ, ಈ ಕಡಲನ್ನು ಹಲವು ದಿಕ್ಕುಗಳಿಂದ ನೋಡುವ ಅವಕಾಶ ಒದಗಿತು. ನಿಸರ್ಗದ ಚೆಲುವಿನ ಆಗರವಾಗಿರುವ ಇದು, ಇಲ್ಲಿನ ಧರ್ಮ ಸಂಸ್ಕೃತಿ ರಾಜಕಾರಣ ವ್ಯಾಪಾರಗಳನ್ನು ರೂಪಿಸಿದ ಶಕ್ತಿಕೇಂದ್ರವಾಗಿದೆ. ಈ ಕೇಂದ್ರದ ಪಾತ್ರಧಾರಿಗಳು, ಕಡಲ ಸೆರಗಿನಲ್ಲಿ ಸಿಗುವ ಕೆಸರು ಅನಿಲ ತೈಲಗಳು.

ಅಝುರ್‌ಬೈಜಾನ್ ಕೆಸರಬುಗ್ಗೆಗಳಿಗೆ ಖ್ಯಾತ. ಇವು ಶಿಲಾಯುಗದ ಬಂಡೆಚಿತ್ರಗಳಿರುವ ಗೊಬುಸ್ತಾನ್ ರಾಷ್ಟ್ರೀಯ ಉದ್ಯಾನದಲ್ಲಿವೆ. ಇಲ್ಲಿಗೆ ಮುಟ್ಟುವ ಕೊನೆಯ 10 ಕಿಮೀ ಹಾದಿ ಮಾತ್ರ ಕರಕಷ್ಟ. ಕುರುಚಲು ಗಿಡದ ಮರುಭೂಮಿಯಲ್ಲಿ ಕಾವಲು ನಿಂತ ಬೋಳುಬೆಟ್ಟಗಳ ನಡುವೆ ಗುಂಡಿಗೊಟರುಗಳಲ್ಲಿ ಹಾಯುವ ಕಚ್ಚಾರಸ್ತೆ. ಅದನ್ನು ದಾಟಿಸಲೆಂದೇ ಮೀಸಲಾದ ಲಟಾರಿ ಕಾರುಗಳು.

ನಮ್ಮ ಕಾರು ಮರುಭೂಮಿಯಲ್ಲಿ, ತೈಲಬಾವಿ ಕೊರೆಯಲು ಗುರುತು ಮಾಡಿದ ಕಂಬಗಳ ನಡುವೆ, ಯಾನ ಹೊರಟಿತು. ಅದರೆ ನಮ್ಮ ಮುಂದಿದ್ದ ಕಾರು ಸುತ್ತಲಿನ ಏನೂ ಕಾಣದಂತೆ ಧೂಳಿನ ಮೋಡ ಸೃಷ್ಟಿಸುತ್ತಿತ್ತು. ರಷ್ಯನ್ ಮತ್ತು ಅಝುರಿ ಬಿಟ್ಟರೆ ಬೇರೆ ಭಾಷೆ ಬಾರದ ಚಾಲಕನಿಗೆ, ಕೈಸನ್ನೆಯಿಂದ 'ಅದನ್ನು ಹಿಂದಿಕ್ಕು' ಎಂದೆ. ನನ್ನ ಸೂಚನೆ ಕಾರ್ಯಗತಗೊಂಡ ರೀತಿ ಭೀಕರವಾಗಿತ್ತು. ಆತ ಸರಕ್ಕನೆ ಕಚ್ಚಾರಸ್ತೆಯಿಂದ ಕಾಡುರಸ್ತೆಗೆ ಇಳಿಸಿದವನೇ, ರೇಸ್‌ಕಾರಿನಂತೆ ಓಡಿಸತೊಡಗಿದ. ಅಂತಿಮ ದಿನಗಳು ಸಮೀಪಿಸಿದವೇ, ಯಾಕಾದರೂ ಹೇಳಿದೆನೊ, ಕಾರಿನ ಬಿಡಿಭಾಗಗಳು ಎಲ್ಲಿ ಕಳಚಿಬೀಳುವವೊ ಎಂದು ಕಂಗಾಲಾಯಿತು. ಲಟಾರಿ ಕಾರಿನ ಮಹಿಮೆ ಮನವರಿಕೆ ಯಾಯಿತು. ಅದಕ್ಕೆ ಹೆಚ್ಚು ಅಶ್ವಶಕ್ತಿಯಿರುವ ಇಂಜಿನ್ ಅಳವಡಿಸಿರಬೇಕು. ನಾನು ಎದೆಯ ಬಳಿ ಕೈಯಿಟ್ಟು, ಪುಕುಪುಕು ಎನ್ನುತಿದೆ ಎಂದು ಸನ್ನೆಮಾಡುತ್ತ, ಸ್ಲೊಸ್ಲೊ ಎಂದು ಕೂಗಿದೆ. ಹಿಂದೆ ಕೂತಿದ್ದ ಗೆಳೆಯರಾದ ವಿ.ಎಸ್.ಶ್ರೀಧರ್- ಸರ್ವಮಂಗಳಾ ಕೂಡ ವೇಗ ನಿಯಂತ್ರಿಸಿ ಎಂದರು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಅಷ್ಟುಹೊತ್ತಿಗೆ ಕಾರು ಮರುಭೂಮಿಯನ್ನು ದಾಟಿ, ಹುಚ್ಚು ಹಿಡಿದವರಂತೆ ಎಪ್ಪತ್ತು ಡಿಗ್ರಿ ಇಳಿಜಾರಿನ ಬೆಟ್ಟವೊಂದನ್ನು ಸರಸರ ಏರತೊಡಗಿತು. ಕಣಿವೆಯಿಂದ ಜಿಗಿಯುತ್ತ ಬೆಟ್ಟವನ್ನೇರುವ ಕಡವೆಯಂತೆ ಏರಿ, ಸಪಾಟಾದ ನೆತ್ತಿಗೆ ಹೋಗಿ ನಿಂತಿತು. ಬೆಟ್ಟದ ನೆತ್ತಿಯಿಂದ ಬಿಸಿಲಿಗೆ ಕಾಯುತ್ತಿರುವ ಕ್ಯಾಸ್ಪಿಯನ್ ಕಡಲು ಥಳತಳಿಸುತ್ತ ಕಾಣುತ್ತಿತ್ತು. ಅದರೊಳಗೆ ಕೊರೆದ ತೈಲಬಾವಿಯ ಚಪ್ಪರ, ಲಂಗರು ಹಾಕಿದ ಹಡಗಿನಂತೆ ತೋರಿತು. ಬೆಟ್ಟದ ಮೇಲಿದ್ದ ವಿಶಾಲ ಪ್ರದೇಶದಲ್ಲಿ ನೂರಾರು ಕೆಸರುಕಾರುವ ದಿನ್ನೆಗಳಿದ್ದವು. ಬೃಹದಾಕಾರದ ಹುತ್ತಗಳಂತಿದ್ದ ಈ ದಿನ್ನೆಗಳ ಮುಖದಿಂದ, ನೆಲದ ಹುಣ್ಣು ಒಡೆದಂತೆ ಕೆಸರು ಹೊರಗೆ ಹರಿಯುತ್ತಿತ್ತು. ಅದು ಭೂಗರ್ಭದೊಳಗಿಂದ ಗೊರ್‌ಗೊಟರ್ ಶಬ್ದಮಾಡುತ್ತ, ಆಲೆಮನೆಯ ಕೊಪ್ಪರಿಗೆಯ ಕಬ್ಬಿನಹಾಲಿನಂತೆ ಕುದಿಯುತ್ತ, ಗೋಳಗುಮ್ಮಟದ ಗುಳ್ಳೆ ನಿರ್ಮಿಸುತ್ತ ಹೊಯ್ದಾಡುತ್ತಿತ್ತು. ಈ ಕೆಸರಾಟ ಎಷ್ಟು ಮಿಲಿಯನ್ ವರ್ಷಗಳಿಂದ ನಡೆಯುತ್ತಿದೆಯೊ? ಮುಟ್ಟಿನೋಡಿದೆ. ಎರೆಮಣ್ಣಿನ ಪಾಯಸದಂತಿದ್ದ ಕೆಸರು ತಣ್ಣಗಿತ್ತು. ಒಳಲೆಯಂತಿದ್ದ ಅದರ ಬಾಯಿಯ ಸೋಟೆಯಿಂದ ಹರಿವ ಕೆಸರನ್ನು ಪ್ರವಾಸಿಗರು ಬಾಟಲಿಗಳಲ್ಲಿ ತುಂಬಿಕೊಳ್ಳುತ್ತಿದ್ದರು. ಸಣ್ಣಬಾವಿಗಳಂತಹ





ಕೆಸರಚಿಲುಮೆಗಳಲ್ಲಿ ಕೆಲವರು ಮುಳುಗೇಳುತ್ತಿದ್ದರು. ಹಾಗೆ ಪಂಕಲೇಪಿತನಾಗಿ ಕಂಬಳದ ಕೋಣನಾಗಿದ್ದ ಅಝುರ್‌ಬೈಜಾನಿ ತರುಣನೊಬ್ಬ, ಸನ್ನೆಯಿಂದ ನಮ್ಮಲ್ಲಿ ಸಿಗರೇಟು ಕೇಳಿದನು. ಕೆಸರಲೇಪನ ಚರ್ಮಕಾಂತಿಯನ್ನು ಹೆಚ್ಚಿಸುವುದಂತೆ. ಕೆಂಪಗೆ ಹೊಳೆವ ಅಝುರಬೈಜಾನಿಗರಿಗೆ ಇದರ ಅಗತ್ಯವಿದ್ದಂತೆ ತೋರಲಿಲ್ಲ.


ಅಝುರ್‌ಬೈಜಾನಿನಲ್ಲಿ ಐನೂರಕ್ಕೂ ಹೆಚ್ಚು ಕೆಸರ ಚಿಲುಮೆಗಳಿವೆ. ಇವು ತೈಲ ಮತ್ತು ಅನಿಲ ನಿಕ್ಷೇಪಗಳ ಬಂಧುಗಳು. ಕೆಲವು ಬುಗ್ಗೆಗಳು ಕ್ಯಾಸ್ಪಿಯನ್ ಕಡಲೊಳಗಿವೆ. ಅವುಗಳಲ್ಲಿ ಒಂದು ಬಾಂಬಿನಂತೆ ಸಿಡಿದು ಬಾನೆತ್ತರಕ್ಕೆ ಜ್ವಾಲೆಯನ್ನು ಹೊಮ್ಮಿಸಿದ್ದುಂಟು. ಈ ಬಡಬಾನಲದಿಂದ ನೀಲ ಕ್ಯಾಸ್ಪಿಯನ್ ಕಡಲು ಕಪ್ಪುರಾಡಿಯಾಗಿತ್ತು. ಕ್ಯಾಸ್ಪಿಯನ್ ತೀರದ ಇನ್ನೊಂದೆಡೆ, ಯಾನಾರ್‌ದಾಗ್ (ಉರಿವ ಬೆಟ್ಟ) ಎನ್ನುವ ಜ್ವಾಲಾಮುಖಿಯಿತ್ತು. ಅಲ್ಲಿ ಬೆಟ್ಟದ ಟೊಳ್ಳು ಭಾಗದಿಂದ ಅನಿಲ ಹೊಮ್ಮುತ್ತ ಜ್ವಾಲೆ ಹೊತ್ತಿ ಉರಿಯುತ್ತಿತ್ತು. ಜ್ವಾಲೆ ಹೊಮ್ಮುವ ಭಾಗದ ಮಣ್ಣೆಲ್ಲವೂ ಸುಟ್ಟು ಇಟ್ಟಿಗೆಯಂತೆ ಕೆಂಪೇರಿತ್ತು. ಜೋರುಗಾಳಿ ಬೀಸಿದಾಗ ಕ್ಷಣಕಾಲ ಆರುತ್ತಿದ್ದ ಜ್ವಾಲೆ, ಮತ್ತೆ ಧಗ್ಗನೆ ಪುಟಿಯುತ್ತಿತ್ತು. ನಿಸರ್ಗದ ಈ ಅದ್ಭುತ ವಿದ್ಯಮಾನಕ್ಕೆ ವಿಸ್ಮಯಗೊಂಡ ಆದಿಮ ಬುಡಕಟ್ಟು ಜನ, ಬೆಂಕಿ ಆರಾಧನೆ ಶುರು ಮಾಡಿರಬೇಕು. ಅದುವೇ ವಿಕಸನಗೊಂಡು ಜೊರಾಷ್ಟ್ರಿಯನ್ ಧರ್ಮವಾಗಿ ರೂಪುಗೊಂಡಿರಬೇಕು. 'ಯಾನಾರ್ ದಾಗ್' ಈಗಲೂ ಅಗ್ನಿಯಾರಾಧಕ ಫಾರಸಿಗಳಿಗೆ ಪವಿತ್ರ ಸ್ಥಳ. ಮುಂಬೈನ ಪಾರ್ಸಿ ದೇಗುಲದಲ್ಲಿ ಈಗಲೂ ಜ್ವಾಲೆ ಜ್ವಲಿಸುತ್ತಿರುತ್ತದೆ. ಅಗ್ನಿಪೂಜಕರಾದ ವೇದಕಾಲೀನ ಆರ್ಯರು ಯುರೇಶಿಯಾದ ಈ ಭೂಭಾಗದಿಂದಲೇ ಭಾರತಕ್ಕೆ ವಲಸೆ ಬಂದವರು ಎಂಬ ವಾದವೂ ಇದೆಯಷ್ಟೆ.

ಕ್ಯಾಸ್ಪಿಯನ್ ತಟದ ಸುರಖಾನಿ ಎಂಬಲ್ಲಿ ಜ್ವಾಲೆಕಾರುವ ಮತ್ತೊಂದು ಜಾಗವಿದೆ. ಇದನ್ನು 'ಆತಿಶ್‌ಗಾಹ್' (ಅಗ್ನಿದೇಗುಲ) ಎನ್ನಲಾಗುತ್ತದೆ. ಇದರ ಹಳೆಯ ಚಿತ್ರಪಟಗಳಲ್ಲಿ, ಅಗ್ನಿಕುಂಡದಿಂದ ಅಗ್ನಿಜ್ವಾಲೆಗಳು ಹೊಮ್ಮುತ್ತಿರುವ ಚಿತ್ರಣವಿದೆ. ಅನಿಲ-ತೈಲಗಳನ್ನು ದೊಡ್ಡಪ್ರಮಾಣದಲ್ಲಿ ತೆ?ಗೆಯಲು ಆರಂಭಿಸಿದ ಬಳಿಕ, ಈ ಜ್ವಾಲೆಗಳು ನಿಂತುಹೋದವು. ಈಗ ಅಗ್ನಿಕುಂಡಕ್ಕೆ ಕೃತಕವಾಗಿ ಅನಿಲ ಪೂರೈಸುತ್ತ ಜ್ವಲಿಸುವಂತೆ ಮಾಡಿದೆ. ಈ ಅಗ್ನಿದೇಗುಲ ಹಿಂದೊಮ್ಮೆ, ಚೀನಾದಿಂದ ಇಟಲಿಯ ತನಕ 7000 ಸಾವಿರ ಕಿಮೀ ಫಾಸಲೆಯಿದ್ದ ಸಿಲ್ಕರೂಟಿಗೆ ಸೇರಿಕೊಳ್ಳುತ್ತಿದ್ದ, ಭಾರತೀಯ ವ್ಯಾಪಾರಿಗಳ ತಂಗುದಾಣವಾಗಿತ್ತು. ಇದನ್ನು ಭಾರತದ ಫಾರಸಿ ಸಿಖ್ ಹಿಂದೂ ವ್ಯಾಪಾರಿಗಳು 18ನೇ ಶತಮಾನದಲ್ಲಿ ಕಟ್ಟಿಸಿದರು. ಬ್ರಿಟಿಶ್ ವ್ಯಾಪಾರಿಗಳು, ಇಲ್ಲಿದ್ದ ಹಠಯೋಗಿಗಳ ಬಗ್ಗೆ ದಾಖಲಿಸಿದ್ದಾರೆ. ಅಗ್ನಿದೇಗುಲದ ಸುತ್ತಲೂ ಕೋಟೆಗೋಡೆಯಿದೆ. ಇದು ಸರಕು ಸಂಗ್ರಹಿಸುವ ವ್ಯಾಪಾರಿ ಕೋಠಿಯಾಗಿಯೂ ಕೆಲಸ ಮಾಡಿರುವಂತಿದೆ. ಬೌದ್ಧವಿಹಾರಗಳಲ್ಲಿ ಅಥವಾ ಸೂಫಿಗಳ ಖಾನಖಾಗಳಲ್ಲಿ ಇರುವಂತೆ, ಗುಡಿಯ ಸುತ್ತ ವರ್ತುಳಾಕಾರವಾಗಿ ಖೋಲಿಗಳಿವೆ. ಗುಹೆಯಂತಹ ಈ ಖೋಲಿಗಳಲ್ಲಿ ಭಾರತೀಯ ವ್ಯಾಪಾರಿಗಳು ಒಟ್ಟಿಗಿರುವ ಪ್ರತಿಕೃತಿಗಳಿವೆ. ಖೋಲಿಯ ಹೊರಗೋಡೆಗಳಲ್ಲಿ ದೇವನಾಗರಿ ಲಿಪಿಯಲ್ಲಿ ಸಂಸ್ಕೃತದಲ್ಲೂ ಮತ್ತು ನಶ್ತಲಿಕ್ ಲಿಪಿಯಲ್ಲಿ ಫಾರಸಿಯಲ್ಲೂ ಗುರುಮುಖಿ ಲಿಪಿಯಲ್ಲಿ ಪಂಜಾಬಿಯಲ್ಲೂ ಕೆತ್ತಿದ ಶಾಸನಗಳಿವೆ. ಲಿಪಿ ಬೇರೆಯಾದರೂ ಇವೆರಡೂ ಇಂಡೊಆರ್ಯನ್ ಕುಟುಂಬಕ್ಕೆ ಸೇರಿದ ಸೋದರ ಭಾಷೆಗಳು. ದೇವನಾಗರಿ ಶಾಸನಗಳಲ್ಲಿ ಗಣಪತಿ ಸ್ತುತಿಯಿದೆ. ಭಾರತದ ಫಾರಸಿಗಳು ಈಗಲೂ ಈ ಅಗ್ನಿದೇಗುಲಕ್ಕೆ ಯಾತ್ರೆ ಬರುತ್ತಾರಂತೆ.

ಚರಿತ್ರೆಯಲ್ಲಿ, ವಣಿಕ ದಾರಿಗಳ ಕಾರವಾನುಗಳು ತಂಗುವ ತಾಣಗಳುದ್ದಕ್ಕು ಮಸೀದಿ ಚರ್ಚು ಗುಡಿ ವಿಹಾರಗಳಿವೆ. ಧರ್ಮ ವ್ಯಾಪಾರ ವಾಸ್ತುಶಿಲ್ಪ ಶಿಲ್ಪಕಲೆಗಳು ಅಲ್ಲಿ ಅಣಿನೆರೆದಿವೆ. ನನಗೆ ಐಹೊಳೆಯಿಂದ ಸತ್ಯಮಂಗಲದ ತನಕ ವಣಿಕಪಥದಲ್ಲಿರುವ ಗುಡಿಗಳು ನೆನಪಾದವು. ಬೃಹದಾಕಾರ ಬುದ್ಧನ ಪ್ರತಿಮೆಯಿದ್ದ ಬಮಿಯಾನ್‌ನೆನಪಾಯಿತು. ರೇಷ್ಮೆಹಾದಿಯು ಮಾನವಸಾಹಸಗಳಿಗೂ ವಾಸ್ತುಶಿಲ್ಪ ವ್ಯಾಪಾರ ಧಾರ್ಮಿಕ ಸಂಕರಗಳಿಗೆ ಕಾರಣವಾಗಿದೆ. ಇದರ ಪರಿಣಾಮವನ್ನು ಕಶ್ಗರ್ ಬಮಿಯಾನ್ ಸಮರಖಂಡ ಬಾಕು ಇಸ್ತಾನ್‌ಬುಲ್ ವೆನಿಸ್‌ಗಳಲ್ಲಿ ನೋಡಬಹುದು. ನಮ್ಮ ಮಾರ್ಗದರ್ಶಿ ರಾಮಿಲ್ ಬಾಕು ರೇಷ್ಮೆಹಾದಿಯ ನಗರ ಎಂಬುದನ್ನು ಮತ್ತೆಮತ್ತೆ ಹೇಳುತ್ತಿದ್ದ. ನಾವು ಬಾಕುವಿನ ಅಂಗಡಿಗಳಲ್ಲಿ ರೇಷ್ಮೆವಸ್ತ್ರಗಳನ್ನು ರೇಷ್ಮೆ ಉಣ್ಣೆ ಬಳಸಿದ ಮಾಡಿದ ರತ್ನಗಂಬಳಿಗಳನ್ನು ನೋಡಿದೆವು. ಇರಾನ್ ಅಫಘಾನಿಸ್ಥಾನದ ಮೂಲಕ ಭಾರತದ ವ್ಯಾಪಾರಿಗಳು ಬಾಕುಗೆ ಬರುತ್ತಿದ್ದರು. ಇಲ್ಲಿನ ಅಗ್ನಿದೇಗುಲದಲ್ಲಿ ವಸ್ತಿ ಮಾಡುತ್ತಿದ್ದರು. ಇಲ್ಲಿಂದ ರೋಂ ವೆನಿಸ್ ತಬ್ರೀಜ್ ಇಸ್ತಾನಬುಲ್ ಕಡೆಗೂ ತೆಹರಾನ್ ಮಶಾದ್ ಕಷ್ಗರ್ ಚೀನಾಕಡೆಗೂ, ಕೆಳಗೆ ಕಂದಹಾರ್ ಬಮಿಯಾನ್ ಪೇಶಾವರ ಶ್ರೀನಗರದ ಕಡೆಗೆ ಚಲಿಸುತ್ತಿದ್ದರು. ಅಗ್ನಿದೇಗುಲದ ಕೋಟೆ ಮತ್ತು ವಸ್ತಿಗೃಹಗಳು ಸಿಲ್ಕ್ರೂಟಿನ ವ್ಯಾಪಾರಿಗಳು ಮಾಡಿದ ಮಹಾಚಲನೆಯ ಸಂಕೇತಗಳಂತಿದ್ದವು.

ಕ್ಯಾಸ್ಪಿಯನ್ ಕಡಲಗರ್ಭವೂ ಅದರ ತೀರಪ್ರದೇಶಗಳೂ ಹೊಮ್ಮಿಸುತ್ತಿರುವ ಮುಖ್ಯದ್ರವ ಕಚ್ಚಾತೈಲ. ಇಲ್ಲಿನ ನೆಲಕ್ಕೆ ಎಲ್ಲಿ ರಂಧ್ರ ಕೊರೆದರೂ ಎಣ್ಣೆ ಬುಗ್ಗೆಯೊಡೆಯುತ್ತದೆ. ಬಾಕುವಿನ ಹೊರವಲಯದಲ್ಲಿ, ಏತದಿಂದ ರೈತರು ನೀರು ಮೊಗೆವಂತೆ, ರಿಗ್ಗಿಂಗ್ ಯಂತ್ರಗಳನ್ನು ಹಿತ್ತಲು ಮತ್ತು ಪಾರ್ಕುಗಳನ್ನೂ ಬಿಡದಂತೆ ಸ್ಥಾಪಿಸಲಾಗಿತ್ತು. ಇವು ಹಗಲೂ ರಾತ್ರಿ, ಮಕ್ಕಳ ಕೀಲುಕುದುರೆಯಂತೆ ತಲೆಯನ್ನು ಕೆಳಕ್ಕೂ ಮೇಲಕ್ಕೂ ತೂಗುತ್ತಿದ್ದವು. ಇಲ್ಲಿಂದ ಸಂಗ್ರಹವಾಗುವ ಕೆಸರನೀರಿನಂತಹ ಕಚ್ಚಾತೈಲವು ಪೈಪುಗಳ ಮೂಲಕ ರಿಫೈನರಿಗಳಿಗೆ ಹೋಗುತ್ತಿತ್ತು. ಜ್ವಾಲೆಯುಗುಳುವ ಕೆಸರು, ಅನಿಲ ಮತ್ತು ರಾಡಿಯಂತಹ ತೈಲ, ಅಝುರ್‌ಬೈಜಾನಿನ ಆರ್ಥಿಕತೆಯನ್ನೇ ಬದಲಿಸಿದ್ದವು.

ಬಾಕುವನ್ನು ತೊರೆದು ವಿಮಾನ ಹಾರುವಾಗ ಬಿಡುಹಗಲು. ನೀಲಾಕಾಶ. ಬಾಕುನಗರ ಚಿತ್ರ ಬರೆದಂತೆ ಕಾಣುತ್ತಿತ್ತು. ಆಗಸದಿಂದ ನೆಲದ ಮರೆಯ ನಿಧಾನಗಳಂತಿರುವ ಕೆಸರು ಜ್ವಾಲೆ ತೈಲಗಳು ಗೋಚರಿಸಲಿಲ್ಲ. ಆದರೆ ಇವನ್ನು ಹಡೆವ ತಾಯಿ ಕ್ಯಾಸ್ಪಿಯನ್ ಕಡಲು, ತನ್ನ ನೀಲಮೈ ಚಾಚಿ ಆಗಸದೊಂದಿಗೆ ಸ್ಪರ್ಧಿಸುತ್ತಿತ್ತು. ಅದರ ಕಂಪಿಸುವ ಕಿರುಅಲೆಗಳ ಮೇಲೆ ಬಿದ್ದ ಸೂರ್ಯನ ಬೆಳಕು ನಮ್ಮ ಮುಖಕ್ಕೆ ಬಡಿಯುತ್ತಿತ್ತು. (ಪ್ರಜಾವಾಣಿ)



# ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನ



**ಹಂಪಿ ಟೈಮ್ಸ್ ಕೊಪ್ಪಳ**

ನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೆಪ್ಟೆಂಬರ್ 17ರಂದು 77ನೇ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ನಡೆಯಿತು.

ಪ್ರಚಾರ್ಯರಾದ ಡಾ. ಗಣಪತಿ ಲಮಾಣಿ ಅವರು ಮಾತನಾಡಿ, ಈ ಪ್ರದೇಶವನ್ನು ಮೊದಲು ಹೈದರಾಬಾದ್ ನಿಜಾಮರು ಆಳ್ವಿಕೆ ಮಾಡುತ್ತಿದ್ದರು. ಅನೇಕ ಮಹನಿಯರು ಹೋರಾಟ ಮಾಡಿದ ನಂತರ 1948 ಸೆಪ್ಟೆಂಬರ್ 17ರಂದು ಈ ಭಾಗದ ಜನಕ್ಕೆ ಸ್ವಾತಂತ್ರ್ಯ ದೊರೆಯಿತು ಎಂದು ತಿಳಿಸಿದರು.

ಇದು ಹಿಂದುಳಿದ ಪ್ರದೇಶ ಎಂದು ಗುರುತಿಸಿ ಸರಕಾರಗಳು ಈ ಭಾಗಕ್ಕೆ ಅನೇಕ ಸೌಲಭ್ಯ ನೀಡಿವೆ. ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸಿಕ್ಕಿದೆ. ಶಿಕ್ಷಣದಿಂದ ಮಾತ್ರ ನಮ್ಮೆಲ್ಲರ ಅಭಿವೃದ್ಧಿ ಸಾಧ್ಯ. ಹೀಗಾಗಿ ಈ ಭಾಗದ ಜನರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ತಿಳಿಸಿದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಗವಿಸಿದ್ದಪ್ಪ ಮುತ್ತಾಳ ಮಾತನಾಡಿ, ನಮ್ಮ ದೇಶದಲ್ಲಿ 520 ರಾಜರ ಸಂಸ್ಥಾನಗಳಿದ್ದವು. ಇವೆಲ್ಲವನ್ನು ಅಂದಿನ ನಮ್ಮ ನಾಯಕರು ಒಗ್ಗೂಡಿಸಿದರು. ಬ್ರಿಟಿಷರು ನಮ್ಮ ದೇಶವನ್ನು 250 ವರ್ಷಗಳ ಕಾಲ ಆಳ್ವಿಕೆ ಮಾಡಿದರು. ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಅಳವಂಡಿಯ ಶಿವಮೂರ್ತಿಸ್ವಾಮಿಗಳು, ಮುಂಡರಗಿ ಭೀಮರಾಯ ಮತ್ತು ಇನ್ನಿತರರು ಸ್ವಾತಂತ್ರಕ್ಕಾಗಿ ಹೋರಾಟ ಮಾಡಿದ್ದಾರೆ ಎಂದು ಹೇಳಿದರು.

ಉಪನ್ಯಾಸಕ ನಾಗರತ್ನ ತಮ್ಮಿನಾಳ, ವಿಠೋಬ ಎಸ್., ಡಾ.ಹುಲಿಗೆಮ್ಮ, ಡಾ. ಮಲ್ಲಿಕಾರ್ಜುನ, ಡಾ.ಪ್ರದೀಪ್ ಕುಮಾರ್, ಡಾ.ನರಸಿಂಹ, ಡಾ. ಅಶೋಕ ಕುಮಾರ್, ಸುಮಿತ್ರಾ, ಸೌಮ್ಯ ಹಿರೇಮಠ, ಹನುಮಪ್ಪ, ಶ್ರೀಕಾಂತ್, ತಾರಮತಿ, ಲಕ್ಷ್ಮೀ ಎ.ಕೆ., ರುಕ್ಕಮ್ಮ ಸೇರಿದಂತೆ ಕಾಲೇಜಿನ ಬೋಧಕ ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿನಿಯರಿದ್ದರು.

# ಶ್ರೀ ವಿಶ್ವಕರ್ಮ ದಿನಾಚರಣೆ ಸಂಭ್ರಮದಿಂದ ಮೆರವಣಿಗೆ

**ಹಂಪಿ ಟೈಮ್ಸ್ ಕೊಪ್ಪಳ**


ಜಿಲ್ಲಾಡಳಿತದಿಂದ ಶ್ರೀ ವಿಶ್ವಕರ್ಮ ಜಯಂತಿ ಅಂಗವಾಗಿ ಸೆ.18 ರಂದು ಹಮ್ಮಿಕೊಂಡಿದ್ದ ಶ್ರೀ ವಿಶ್ವಕರ್ಮ ಭಾವಚಿತ್ರ ಮೆರವಣಿಗೆಗೆ ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಚಾಲನೆ ನೀಡಿದರು. ಮೆರವಣಿಗೆಯು ಶ್ರೀ ಸಿರಸಪ್ಪಯ್ಯನ ಮಠದಿಂದ ಪ್ರಾರಂಭಗೊಂಡು ಗಡಿಯಾರ ಕಂಬ, ಜವಾಹರ ರಸ್ತೆಯ ಮೂಲಕ ಸಾಹಿತ್ಯ ಭವನದವರೆಗೆ ಅದ್ದೂರಿಯಾಗಿ ಸಾಗಿತು.

ಈ ಸಂದರ್ಭದಲ್ಲಿ ನಗರಸಭೆಯ ಅಧ್ಯಕ್ಷರಾದ ಅಮ್ಜದ್ ಪಟೇಲ್, ಉಪಾಧ್ಯಕ್ಷರಾದ ಅಶ್ವಿನಿ ಗದಗಿನಮಠ, ಕೊಪ್ಪಳ ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕೊಪ್ಪಳ ತಹಶೀಲ್ದಾರರಾದ ವಿಠಲ್ ಚೌಗಲಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕೊಟ್ರೇಶ್ ಮರಬನಳ್ಳಿ ಹಾಗೂ ಸಮಾಜದ ಮುಖಂಡರಾದ ನಾಗೇಶ ಕುಮಾರ್, ದೇವಪ್ಪ ಬಡಿಗೇರ್, ಎ ಪ್ರಕಾಶ, ರುದ್ರಪ್ಪ ಬಡಿಗೇರ್, ಮೌನೇಶ್ ಬಡಿಗೇರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



## ಕವಿ ಮನಸು

### ಜೊತೆಯಲಿ ಇದ್ದರೆ ಹಿಗ್ಗು




ಒಲವಿನ ಬೀಜವ ಬಿತ್ತಿದೆ ಮನದಲಿ
ಮೊಳೆತಿದೆ ಚಂದದಿ ಚಿಗುರಿ
ಚೆಲುವನೆ ಕಾಣೆಯ ಈಮನವಾಗಿದೆ
ಚಲಿಸುತ ತಿರುಗುವ ಬುಗುರಿ

ಕೋಮಲ ಮೊಳಕೆಯ ಜತನದಿ ಕಾವುದು
ತಾಮಸ ನೀಡದೆ ನನಗೆ
ಕಾಮನೆ ಎಲ್ಲವ ನುಡಿಯುವೆ ನಿನ್ನಲಿ
ಚಾಮರ ಬೀಸುವೆ ನಿನಗೆ

ಜತನದಿ ಹೆಜ್ಜೆಯ ಇಡುತಿರು ಗೆಳೆಯನೆ
ಹಿತದಲಿ ಬೆಳೆಯಲಿ ಮೊಗ್ಗು
ಮತಿಯಲಿ ಉಳಿಯಲಿ ಭಾದ್ಯತೆ ನಮ್ಮದು
ಜೊತೆಯಲಿ ನಾವಿರೆ ಹಿಗ್ಗು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಜಡೆ



ಅಮ್ಮ, ನಿನ್ನ ಜಡೆ ಯಾಕೆ ಅಷ್ಟು ಉದ್ದವಿದೆ
ನನಗೂ ಹಾವಿನಂತೆ ನೀಳಜಡೆಯು ಬೇಕಿದೆ
ಹೂವು ಮುಡಿದು ನಾನು ರಾಣಿ ಆಗಬೇಕಿದೆ
ಗೆಳತಿಯ ನಗೆಗೆ ಮರುತ್ತರ ನಾ ನೀಡಬೇಕಿದೆ

ಕೊಬ್ಬರಿ ಎಣ್ಣೆಯ ತಲೆಗೂದಲಿಗೆ ಹಾಕಿದರೆ
ನೀನಾಗುವೆ ಪುಟ್ಟಿ, ಉದ್ದ ಕೂದಲಿನ ನೀರೇ
ಬಾಚಿ ಕೂದಲನ್ನು ಜಡೆ ಹೆಣೆಯುವೆ ಬಾರೇ
ಆಗ ಇನ್ನೂ ಅಂದವಾಗಿ ಕಾಣುತ್ತದೆ ಮೋರೆ

– ವಿಜಯಲಕ್ಷ್ಮಿ ನಾಯ್ಕ್
ಬಿಳಿಯೂರು

### ಸಂತೃಪ್ತಿ

ಮನದಲಿ ಇರಲಿ ಸಂತೃಪ್ತಿ
ಹೊಡೆದೋಡಿಸುವ ನಾವು ಅತೃಪ್ತಿ
ಬಾಳಲಿ ಸಂತಸ ಇರಲಿ ಜಾಸ್ತಿ
ಮುಗುಳ್ನಗೆ ಆಗಲಿ ಎಂದೂ ಸುಸ್ತಿ

ಕಷ್ಟಗಳಿಗೆ ಎಂದೂ ಅಂಜದಿರಿ
ನಗೆಯನು ಹರಡಲು ಮರೆಯದಿರಿ
ಹಣವೇ ಎಲ್ಲವೂ ಎಂದು ನಂಬದಿರಿ
ತೃಪ್ತಿಯೇ ನಿಜಸುಖ ಮನಗಾಣುವಿರಿ

– ಚೇತನ ಭಾರ್ಗವ ಬೆಂಗಳೂರು




# ಮೊದಲು ಸುಸಂಸ್ಕೃತರಾಗಬೇಕಿದೆ

ಭಾರತ ದೇಶ ಆದಿ ಅನಾದಿ ಕಾಲದಿಂದಲೂ ನೆಲ ಜಲ ವಾಯು ಆಚಾರ ವಿಚಾರ ಪೂಜೆ ಪುನಸ್ಕಾರ ದೇವರು ನಂಬಿಕೆ ವಿಶ್ವಾಸ ಉಡಿಗೆ ತೋಡಿಗೆ ಸರ್ವಧರ್ಮ ಧರ್ಮಸಹಿಷ್ಣುತೆಯಿಂದ ಕೂಡಿದ ಶ್ರೀಮಂತ ದೇಶ.

ಭಾರತೀಯ ಸಂಸ್ಕೃತಿಗೆ ಮಾರುಹೋಗದ ದೇಶವೆ ಇಲ್ಲ. ಇಂತಹ ನೆಲದಲ್ಲಿ ಹುಟ್ಟಿದು ನಿಮ್ಮ ಪುಣ್ಯ ಎನ್ನುವ ವಿದೇಶಿಯರ ಮಾತಿನ ಕಡೆ ಸ್ವಲ್ಪ ಗಮನ ಕೊಡುವಂತಹ ಸಂದರ್ಭ ಬಂದಿದೆ.

ಭಾರತೀಯರಾದ ನಮಗೆ ಮನೆಯಿಂದಲೆ ಧಾರ್ಮಿಕ, ನೈತಿಕ, ಸಾಂಸ್ಕೃತಿಕ ಶಿಕ್ಷಣ ಸಿಗುತ್ತೀದೆ ಅಲ್ಲವೆ? ಸಂಬಂಧಗಳ ಮಹತ್ವ, ಪ್ರೀತಿ ಸಹಕಾರ ಸಹಾಯ ಸಾಮಾಜಿಕ ಕಳಕಳಿ ಇತರರನ್ನು ಗೌರವಿಸುವುದು ನಮ್ಮ ಹಿರಿಯರಿಂದ, ನಮ್ಮ ಕುಟುಂಬದಿಂದ ಬಂದ ಬಳುವಳಿ. ಬೇರೆ ದೇಶದ ಜನರು ನಮ್ಮ ಸಂಸ್ಕೃತಿಯನ್ನು ಇಷ್ಟ ಪಡುತ್ತಾರೆ.

ಬೆಳ್ಳಿಗೆ ಬೇಗನೆ ಎದ್ದು ದಿನನಿತ್ಯದ ಕಾರ್ಯ, ಕಸ ಗುಡಿಸುವುದು, ದನಕರುಗಳಿಗೆ ಮೇವು ನೀರು ಉಣಿಸಿ, ಹೆಣ್ಣುಮಕ್ಕಳು ಸ್ನಾನ ಮಾಡಿ ಮನೆಯ ಮುಂದೆ ರಂಗೋಲಿ ಹಾಕುವದು, ದೇವರ ಪೂಜೆ ಕಾಯಿ ಕರ್ಪುರ, ಊದಿನ ಕಡ್ಡಿ, ಊದು, ಲಾಬಣ, ಹೂವಿನ ಸುಗಂಧ ಮನೆಯಲ್ಲಿ ಘಮ ಘಮ ಸುವಾಸನೆ, ಭಕ್ತಿಮೂಡಿಸುವ ಭಾವ, ಅಪ್ಪ ಅಜ್ಜ ಎಲ್ಲರೂ ತಮ್ಮ ತಮ್ಮ ಕಾರ್ಯಾ ಚಟುವಟಿಕೆಗಳನ್ನು ಚಾಚುತಪ್ಪದೆ ಮಾಡುವುದು. ಇತ್ತ ಕಡೆ ಅಡುಗೆ ಮನೆಯಲ್ಲಿ ಅಮ್ಮಮಾಡುತ್ತಿದ ರುಚಿಯಾದ ಅಡುಗೆ, ಅಜ್ಜಿಯ ಕಥೆ, ತಾತನೊಂದಿಗೆ ಸಂತೆಗೆ ಹೊಗಿ ಆಟಿಕೆ ತಿಂಡಿ ತಿನಿಸು ತೆಗೆದುಕೊಂಡು ಬರುವ ಸಂಭ್ರಮ, ಸಹೋದರರೊಂದಿಗೆ ಒಡನಾಟ, ಗೆಳೆಯರೊಂದಿಗೆ ಗಿಲ್ಲಿದಾಣ್ಡಿನಾಟ, ವಾರದ 2 ದಿನ ಅಮ್ಮ ಅಜ್ಜಿಯೊಂದಿಗೆ ಊಟದ ಜೊತೆಗೆ ಉಪವಾಸ ಮಾಡುವುದು, ಅಜ್ಜ ಅಪ್ಪನೊಂದಿಗೆ ದೇವಸ್ಥಾನ ಪ್ರವಚನಗಳಲ್ಲಿ ಕುಳಿತು ಖುಷಿ ಪಡುವುದು. ಗೆಳತಿಯರೊಡನೆ ಕೆರೆ ಹಳ್ಳಕ್ಕೆ ಹೋಗಿ ಬಟ್ಟೆ ತೊಳೆಯೋದು, ಜಾತ್ರೆಗಳಲ್ಲಿ ಹೊಸ ಲಂಗದವಣಿ ಉಟ್ಟು ಶೃಂಗಾರ ಮಾಡಿಕೊಂಡು ಹೋಗೊದು, ಇತ್ತ ಪಡ್ಡೆ ಹುಡುಗರು ನಾವೇನು ಕಮ್ಮಿಯಿಲ್ಲ ಎನ್ನುವಂತ್ತೆ ಜಾತ್ರೆಯಲ್ಲಿ ಹುಡುಗಿಯರ ಮುಂದೆ ಕುಸ್ತಿ ಪಟುವಾಗಿ ಗೆದ್ದು ಶಕ್ತಿ ಪ್ರದರ್ಶನ ಮಾಡುವುದು, ನಾಟಕ ದೊಡ್ಡಾಟ, ಕೋಲಾಟಗಳನ್ನು ನೋಡುವುದು.



ನಂದಿನಿ ಸನಬಾಲ್
ಶಿಕ್ಷಕಿ, ಲೇಖಕಿ ಗುಲ್ಬರ್ಗಾ

Scan For Digital Colourful
HAMPI TIMES E-paper

ಕೆರೆಗಳಿಗೆ ಹೊಗಿ ಇಜಾಡುವುದು. ಇನ್ನೊಬ್ಬರ ಹೊಲಗದ್ದೆಗಳಿಗೆ ಹೋಗಿ ಮಾವಿನ ಹಣ್ಣು ಕದಿಯೋದು ಅಬ್ಬಬ್ಬಾ ಎಂತಹ ದಿನಗಳು, ಹಬ್ಬ ಹುಣ್ಣಿಮೆ ಹರಿದಿನಗಳಲ್ಲಿ ಪೂಜಾ ಪುನಸ್ಕಾರ ಉಡಿಗೆ ತೋಡಿಗೆ ಆಗಿನ ಜಾತ್ರೆಗಳು, ಉತ್ಸವಗಳು ಎಲ್ಲಿ ಮರೆಯಾಗಿವೆ?





ಎಲ್ಲಿದೆ ಆ ಸಂಭ್ರಮ, ಸಂತೋಷ?

ಅದು ಸುವರ್ಣ ಯುಗವೆ ಸರಿ....

ಇತ್ತೀಚಿನ ಜೀವನ ಶೈಲಿ ದೇವಾ ಭಯಾನಕವಾಗಿದೆ, ಮನೆಯಲ್ಲಿಯೆ ತಪ್ಪಿದ ಸಂಸ್ಕೃತಿ ಇದಕ್ಕೆ ಕಾರಣ ವಿಭಕ್ತ ಕುಟುಂಬ ಅಂದರೆ ಚಿಕ್ಕ ಕುಟುಂಬ, ಅಮ್ಮ ಅಪ್ಪ ಇಬ್ಬರು ಮಕ್ಕಳು. ನಾಲಕ್ಕು ಜನರ ಚಿಕ್ಕದಾದ ಚೊಕ್ಕದಾದ ಚಿಕ್ಕ ಕುಟುಂಬಕ್ಕೆ 2,3,4 ಮಹಡಿಯ ಕಟ್ಟಡಗಳು, ಪ್ರತಿಯೊಬ್ಬರಿಗೂ ಬೇರೆ ಬೇರೆ ಬೇಡ ರೂಮ್, ಬಾತ್ ರೋಮ್. ಬಟ್ಟೆ ಪಾತ್ರೆ ಅಡುಗೆ ಹೀಗೆ ನಾಲಕ್ಕು ಜನ ಇರುವ ಕುಟುಂಬಕ್ಕೆ ಎಂಟು ಜನ ಕೆಲಸದವರು.

ರಾತ್ರಿ ಕೆಲಸ ಪಾರ್ಟಿ ಅಂತ ಲೇಟ್ ಆಗಿ ಬರೋದು, ಬಂದ ಮೇಲೆ ತನ್ನ ಬೇಡ ರೂಮ್‌ಗೆ ಹೋಗಿ ಮೊಬೈಲ್ ನಲ್ಲಿ ಸಮಯ ಕಳೆಯೋದು, ಬೆಳ್ಳಿಗೆ ಲೇಟಾಗಿ ಎದ್ದು ಗಡಿಬಿಡಿಯಲ್ಲಿ ಆಫೀಸ್‌ಗೆ ಹೋಗೊದು. ಈ ಕಡೆ ಹೆಣ್ಣುಮಕ್ಕಳು ಕೂಡ ಲೇಟ್ ಆಗಿ ಎದ್ದು ಗಡಿಬಿಡಿ ಜೀವನ ಪೂಜೆ ಪುನಸ್ಕಾರಕ್ಕೆ ಗಮನ ಕೊಡುತ್ತಿಲ್ಲ, ರಂಗೋಲಿಗೆ ಅಂಗಳ ಇಲ್ಲ, ಅಂಗಳ ಇದ್ದರು ಬೆಳ್ಳಿಗೆ ಬೇಗನೆ ಎದ್ದು ರಂಗೋಲಿ ಬಿಡಿಸುವವರಿಲ್ಲ.

ವೀಕ್‌ಎಂಡ್ ಬಂದಾಗ ಕೂಡ ಕುಟುಂಬದೊಂದಿಗೆ ಸಮಯ ಕಳೆಯೋದು ಬಿಟ್ಟು, ಮಾದಕ ವ್ಯಸನಕ್ಕೆ ಬಲಿಯಾಗೋದು, ಟ್ರಿಪ್ ಪಬ್ ಬಾರ್ ಹೋಗೊದು ವಾಡಿಕೆ ಆಗಿ ಬಿಟ್ಟಿದೆ.

ಮರೆಯಾಗುತ್ತಿರುವ ಹಬ್ಬ ಹರಿದಿನಗಳು. ಹಬ್ಬಗಳ ಮಹತ್ವವನ್ನು ಮರೆತು ಬಿಟ್ಟಿದ್ದೇವೆ, ಎಷ್ಟೊ ಕುಟುಂಬಗಳಲ್ಲಿ ಮಕ್ಕಳಿಗೆ ಹಬ್ಬಗಳ ಹೆಸರು ಕೂಡ ಗೊತ್ತಿಲ್ಲ ಎನ್ನುವ ಸಂಗತಿ ನಿಜಕ್ಕೂ ನಾಚಿಗೆಡು ಸಂಗತಿ. ಹಬ್ಬ ಮಾಡಿದರು ಕಾಟಾಚಾರದ ಆಚರಣೆಗಳು, ಒಬ್ಬಟ್ಟು ಹೋಳಿಗೆ ಸಿಹಿ ತಿಂಡಿ ತಿನಿಸುಗಳು ಮಾಡದೆ ಆಲಸ್ಯ ಮಾಡಿ ರೆಡಿಮೇಡ್ ತಿಂಡಿ ತಿನಿಸು ಹೋಳಿಗೆಗಳನ್ನು ನೈವೆದ್ಯಕ್ಕೆ ಇಡುತ್ತಿರುವುದು ಕೂಡ ನೊಡುತ್ತಿದ್ದೇವೆ.

ಇತ್ತ ಕಡೆ ಕೆಲವು ಪುರುಷರು ತಮ್ಮ ಸಂಸ್ಕೃತಿಯನ್ನು ಮರೆತೆ ಬಿಟ್ಟಿದ್ದಾರೆ, ಉನ್ನತ್ತ ಹುದ್ದೆ ಅಧಿಕಾರದ ವ್ಯಾಮೋಹ ಎಲ್ಲವನ್ನು ನಾನು ಅನುಭವಿಸಬಲ್ಲೆ ಎನ್ನುವ ಅಹಂಕಾರ ಬಟ್ಟೆ ಬದಲಾಯಿಸಿದಂತ್ತೆ ಹುಡುಗಿಯರನ್ನು ಕೂಡ ಬದಲಾಯಿಸುವ ಅಸಹ್ಯ ಪ್ರವೃತ್ತಿ ಹೊಂದಿದ್ದಾರೆ. ಇಂತಹ ಕಲಿಯುಗದಲ್ಲಿ ಒಳ್ಳೆಯ ಹುಡುಗರು ಕೂಡ ಇದಾರೆ ಇದಕ್ಕೊಂದು ನಿದರ್ಶನ ಎಂದರೆ ಒಬ್ಬ ಟೆಕ್ಕಿ ITBT ಯಲ್ಲಿ ಕೆಲಸ ಮಾಡುತ್ತಿದ್ದರು ಕೂಡ ಅಲ್ಲಿನ ಪಾಶ್ಚಾತ್ಯ ಸಂಸ್ಕೃತಿಗೆ ಕ್ಯಾರೆ ಎನ್ನದೆ ತನ್ನ ವೃತ್ತಿಯೊಂದಿಗೆ ಗೆಳೆಯರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ಯಾವುದೆ ಹುಡುಗಿಯ ಹಾಗೂ ದುಷ್ಟಚಟಗಳಿಗೆ ಬಲಿಬೀಳದೆ ಯೋಗ, ವ್ಯಾಯಾಮ, ಪುಸ್ತಕಗಳನ್ನು ಓದುವ ಹವ್ಯಾಸ ಮಾಡಿಕೊಂಡಿದ್ದು, ರಜಾ ದಿನಗಳಲ್ಲಿ ತನ್ನ ಹಳ್ಳಿಗೆ ಹೋದಾಗ, ಅದೆ ನಯ ವಿನಯ ಪ್ರೀತಿಯೊಂದಿಗೆ ಅಮ್ಮ, ಸಹೋದರಿ, ದೊಡ್ಡಮ್ಮ, ದೊಡ್ಡಪ್ಪ ಎಲ್ಲರೊಂದಿಗೆ ಸಮಯ ಕಳೆಯುವ, ಯಾವುದೆ ಅಹಂಕಾರವಿಲ್ಲದೆ ಈಗಲೂ ಕೃಷಿಯಲ್ಲಿ ಕುಟುಂಬದೊಂದಿಗೆ ಕೆಲಸ ಮಾಡುವ, ಗಣೇಶ್ ಉತ್ಸವ, ಹಬ್ಬ ಹರಿದಿನಗಳಲ್ಲಿ ಕುಟುಂಬದಲ್ಲಿ ಪಾಲ್ಗೊಂಡು ಸಂಸ್ಕೃತಿಯನ್ನು ಜೀವಂತವಾಗಿರಿಸುವ ಹೃದಯವಂತ ಹುಡುಗರು ಕೂಡ ಇರುವವರು ಇದ್ದಾರೆ.

ಹುಡುಗಿಯರ ಯುವತಿಯರು ಕೂಡ ಎಷ್ಟೆ ಉನ್ನತ ಶಿಕ್ಷಣ, ಉನ್ನತ ಹುದ್ದೆ ಮೇಲೆ ಇದ್ದರು ಕೂಡ ನಮ್ಮ ಸಂಸ್ಕೃತಿ, ಉಡಿಗೆ ತೋಡಿಗೆಯನ್ನು ಮರೆಯದಿರಿ ನಮ್ಮತವನ್ನು ಉಳಿಸಿಕೊಳ್ಳಿ.

"ಹೆಣ್ಣು ಸಂಸಾರದ ಕಣ್ಣು" ಅಳಿಸಿಹೋಗುತ್ತಿರುವ ನಮ್ಮ ಸಂಸ್ಕೃತಿ ಉಳಿಸುವ ಮಹತರ ಜವಾಬ್ದಾರಿ ಮನೆಯ ಅಮ್ಮನಿಂದ, ಹೆಣ್ಣಿನಿಂದ ಆರಂಭ ಆಗಬೇಕು ಅಲ್ಲವೆ.....

# ವಿದ್ಯಾರ್ಥಿಗಳಿಗೆ ಗಣಿತ ಪ್ರಾವೀಣ್ಯತೆ ಪ್ರಮಾಣ ಪತ್ರ ನೀಡಿ ಗೌರವ ಸಲ್ಲಿಕೆ

■ ಹಂಪಿ ಟೈಮ್ಸ್ ಕೊಪ್ಪಳ

ಗಣಿತ ಕಲಿಕಾ ಆಂದೋಲನ ಕಾರ್ಯಕ್ರಮದಡಿ ಉತ್ತಮ ಸಾಧನೆ ಮಾಡಿದ ಕೊಪ್ಪಳ ಜಿಲ್ಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕೊಪ್ಪಳ ಜಿಲ್ಲಾಡಳಿತದಿಂದ ಸೆ.17ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 77ನೇ ಕಲ್ಯಾಣ ಕರ್ನಾಟಕ ಉತ್ಸವ ದಿನದ ಸಮಾರಂಭದಲ್ಲಿ ಗಣಿತ ಪ್ರಾವೀಣ್ಯತೆ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.



ಗಂಗಾವತಿ ತಾಲೂಕಿನ ಮಲಕನಮರಡಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ದುರ್ಗಾದೇವಿ, ಕೊಪ್ಪಳ ತಾಲೂಕಿನ ಓಜಿನಹಳ್ಳಿಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸೌಮ್ಯ ಮಲ್ಲಪ್ಪ ಮತ್ತು ವಿದ್ಯಾಶ್ರೀ, ಹಾಲವರ್ತಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪರುಶುರಾಮ ಬಸವರಾಜ ಮತ್ತು ಆದಿತ್ಯ ಆಂಜನೇಯ ಅವರಿಗೆ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಗಿ, ಸಂಸದರಾದ ಕೆ. ರಾಜಶೇಖರ ಹಿಟ್ನಾಳ್, ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ ಮತ್ತು ಹೇಮಲತಾ ನಾಯಕ ಅವರು ಗಣಿತ ಪ್ರಾವೀಣ್ಯತೆ ಪ್ರಮಾಣ ಪತ್ರ ನೀಡಿ ಅಭಿನಂದಿಸಿದರು.

ಕರ್ನಾಟಕ ಸರ್ಕಾರ ಮತ್ತು ಅಕ್ಷರ ಫೌಂಡೇಶನ್ ಅವರ ಸಹಭಾಗಿತ್ವದಲ್ಲಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ಜೆಎಸ್‌ಡಬ್ಲ್ಯೂ ಎಂಜಿ ಮೋಟರ್ ಅವರಿಂದ ನಡೆದ ಕಲಿಕಾ ಆಂದೋಲನ ಕಾರ್ಯಕ್ರಮದಡಿ 2023-24ನೇ ಸೇಲಿನ ಗ್ರಾಮ ಪಂಚಾಯತಿ ಮಟ್ಟದ ಗಣಿತ ಸ್ಪರ್ಧೆಯಲ್ಲಿ ದುರ್ಗಾದೇವಿ, ಸೌಮ್ಯ, ವಿದ್ಯಾಶ್ರೀ, ಪರಶುರಾಮ ಮತ್ತು ಆದಿತ್ಯ ಅವರು ಭಾಗಿಯಾಗಿ ಉತ್ತಮ ಸಾಧನೆ ಮಾಡಿದ್ದಕ್ಕಾಗಿ ಅಭಿನಂದಿಸಲಾಯಿತು.

ಈ ವೇಳೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಡಾ.ರಾಮ್ ಎಲ್. ಅರಸಿದ್ದಿ, ಪ್ರಾದೇಶಿಕ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಾವ್ಯ ಚತುರ್ವೆದಿ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಹೇಮಂತ ಕುಮಾರ ಹಾಗೂ ಇನ್ನಿತರರು ಇದ್ದರು.

# ಕೃಷಿ ಇಲಾಖೆ; ಹತ್ತಿ ಬೆಳೆಯ ನಿರ್ವಹಣಾ ಕ್ರಮಗಳ ಸಲಹೆ

■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಪ್ರಸ್ತುತ ಹತ್ತಿ ಬೆಳೆಯು ಸುಮಾರು 60-80 ದಿನಗಳ ಬೆಳೆಯಾಗಿದೆ. ಹತ್ತಿ ಬೆಳೆಯಲ್ಲಿ ತೇವಾಂಷದಿಂದ ಸೊರಗಲಾರಂಬಿಸಿ ಪ್ಯಾರ ವಿಲ್ಟ್ (ಹತ್ತಿ ಹಸಿನೆಟೆ) ಸಮಸ್ಯೆ ಉಂಟಾಗುವ ಸಂಭವವಿದ್ದು, ರೈತರು ಕೆಲವು ನಿರ್ವಹಣಾ ಕ್ರಮಗಳನ್ನು ಅನುಸರಿಸಲು ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಅವರು ತಿಳಿಸಿದ್ದಾರೆ.

**ನಿರ್ವಹಣಾ ಕ್ರಮಗಳು:**

ಭೂಮಿಯಲ್ಲಿ ಅತಿಯಾದ ಮಳೆ ನೀರು ಬಸಿದು ಹೋಗುವಂತೆ ಬಿಸಿಗಾಲುವೆ ನಿರ್ಮಿಸಿ, ಕಾಪರ ಆಕ್ಸಿಕ್ಲೋರೈಡ 2.5 ಗ್ರಾಂ ಮತ್ತು ಬೇವು ಲೇಪಿತ ಯೂರಿಯಾ 10 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಬಡ್ಡೆ ಭಾಗ ನೆನೆಯುವಂತೆ ಮಾಡಿ ಸಿಂಪಡಿಸಬೇಕು.

ಕಾರ್ಬನಡೈಜಿಂ ಶೇ.50 ಡಬ್ಲ್ಯೂ 2 ಗ್ರಾಂ ಮತ್ತು ಬೇವು ಲೇಪಿತ ಯೂರಿಯಾ 10 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಬಡ್ಡೆ ಭಾಗ ಹಾಗೂ ಕವಲುಗಳು ನೆನೆಯುವಂತೆ ಸಿಂಪಡಿಸಬೇಕು.

ಬಿಸಿಲಿನ ಅವಧಿಯಲ್ಲಿ ಬೆಳೆಯ ಸಾಲಿನಲ್ಲಿ ಎಡೆಕುಂಟೆ ಹೊಡೆಯುವುದರಿಂದ ಗಿಡದ ಉಸಿರಾಟ ಕ್ರಿಯೆಗೆ ಸಹಕಾರಿಯಾಗಲಿದ್ದು, ನಿಧಾನವಾಗಿ ಹಸಿ ನೆಟೆ ಗಿಡಗಳು ಮಳೆಯ ನಂತರ ಸೂರ್ಯನ ಸೂಕ್ತ ತಾಪಮಾನದ ವಾತವಣಕ್ಕೆ ಹೊಂದಿಕೊಂಡು ಚೇತರಿಸಿಕೊಂಡು ಹತೋಟಿಗೆ ಬರುತ್ತವೆ.

ಹತ್ತಿ ಬೆಳೆಯುವ ರೈತರು ನಿರ್ವಾಹಣಾ ಕ್ರಮಗಳ ಸಲಹೆಗಳನ್ನು ಅನುಸರಿಸಿದರೆ, ಉತ್ತಮ ಫಸಲು ಕಂಡುಕೊಳ್ಳುತ್ತಾರೆ ಎಂದು ತಿಳಿಸಿದ್ದಾರೆ.

# ವಿವಿಧ ಸೌಲಭ್ಯಕ್ಕಾಗಿ ಅರ್ಜಿ ವಿಸ್ತರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಶುಲ್ಕ ಮರುಪಾವತಿ ಮತ್ತು ವಿದ್ಯಾಸಿರಿ(ಊಟ ಮತ್ತು ವಸತಿ ಸಹಾಯ ಯೋಜನೆ) ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಈ ಇಂದೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 15ರ ವರೆಗೆ ವಿಸ್ತರಿಸಲಾಗಿದೆ.

2024-25ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಾದ ಪಿಯುಸಿ ಮತ್ತು ಸಮನಾಂತರ, ಸಮಾನ್ಯ ಪದವಿ ಮತ್ತು ಸಂಯೋಜಿತ ಉಭಯ ಪದವಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ವೆಬ್‌ಸೈಟ್ https://ssp.postmatric.karnataka.gov.in ಗೆ, ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ವೆಬ್‌ಸೈಟ್ https://bcwd.karnataka.gov.in ಗೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಸಹಾಯವಾಣಿ ದೂ.ಸಂ: 8050770005, ಇ-ಮೇಲ್ bcwdhelpline@gmail.com, ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ಸಹಾಯವಾಣಿ 1902, ಇ-ಮೇಲ್, postmatrichelp@karnataka.gov.in ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೆ. 21ರಂದು ವಿದ್ಯುತ್ ಗ್ರಾಹಕರ ಸಂವಾದ ಸಭೆ

■ ಹಂಪಿ ಟೈಮ್ಸ್ ಹೊಸಪೇಟೆ

ಹೊಸಪೇಟೆ ಗ್ರಾಮೀಣ ಉಪ ವಿಭಾಗದಲ್ಲಿನ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಸೆಪ್ಟಂಬರ್ 21ರಂದು ಬೆಳಿಗ್ಗೆ 11 ಗಂಟೆಗೆ ಗ್ರಾಮೀಣ ಉಪ ವಿಭಾಗದ ಕಚೇರಿಯಲ್ಲಿ ಏರ್ಪಡಿಸಲಾಗಿದೆ.

ಆದ್ದರಿಂದ ಹೊಸಪೇಟೆ ತಾಲೂಕಿನ ವಿದ್ಯುತ್ ಗ್ರಾಹಕರು(ನಗರ ಹೊರತುಪಡಿಸಿ) ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆ ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದು ಜೆಸ್ಕಾಂ ಹೊಸಪೇಟೆ ಕಾರ್ಯ ಮತ್ತು ಪಾಲಕ ಗ್ರಾಮೀಣ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆಪಿಸಿಎಲ್; ಶಿಶಿಕ್ಷು ತರಬೇತಿ ಆನ್‌ಲೈನ್ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ವತಿಯಿಂದ ಕುಡತಿನಿಯಲ್ಲಿನ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ನಿಗದಿತ ಮಾಸಿಕ ವೇತನದೊಂದಿಗೆ ಒಂದು ವರ್ಷ ಅವಧಿ ಶಿಶಿಕ್ಷು ತರಬೇತಿ ನೀಡಲು ಅರ್ಹ ಐಟಿಐ ಮತ್ತು ಎಸ್‌ಎಸ್‌ಎಲ್‌ಸಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಸ್ವವಿವರದೊಂದಿಗೆ ವೃತ್ತಿಗನುಗುಣವಾಗಿ ಆನ್‌ಲೈನ್ ವೆಬ್‌ಸೈಟ್ www.apprenticeshipindia.org ಲಿಂಕ್ ಮುಖಾಂತರ ಅ.07 ಸಂಜೆ 5 ಗಂಟೆಯೊಳಗೆ ಸಲ್ಲಿಸಬೇಕು.

**ಶಿಶಿಕ್ಷು ವೃತ್ತಿ ಸಂಖ್ಯೆ ಮತ್ತು ಶಿಷ್ಯವೇತನ:** ಐಟಿಐ ಕೋರ್ಸ್‌ನ ಪೂರ್ಣಗೊಳಿಸಿದ ಎಲೆಕ್ಟ್ರೀಷಿಯನ್-5, ಫಿಟ್ಟರ್-5, ಟರ್ನರ್-2, ವೆಲ್ಡರ್-3, ಕೊಪಾ-ಪಾಸಾ-7. ಶೈಕ್ಷಣಿಕ ಅರ್ಹತೆ ಪಡೆದವರಿಗೆ ನಿಗಮದ ವತಿಯಿಂದ 10,000 ರೂ. ಮಾಸಿಕ ಶಿಷ್ಯವೇತನ ನೀಡಲಾಗುತ್ತದೆ. ಹಾಗೂ ಎಸ್‌ಎಸ್‌ಎಲ್‌ಸಿ ಉತ್ತೀರ್ಣಗೊಂಡ ಎಫ್‌ಓಎ-4 (ಎಸ್‌ಎಸ್‌ಎಲ್‌ಸಿ ಮತ್ತು ಕಂಪ್ಯೂಟರ್) ಹೌಸ್ ಕೀಪರ್-15. ಶೈಕ್ಷಣಿಕ ಅರ್ಹತೆ ಪಡೆದವರಿಗೆ ನಿಗಮದ ವತಿಯಿಂದ 7,000 ರೂ. ಮಾಸಿಕ ಶಿಷ್ಯವೇತನ ನೀಡಲಾಗುತ್ತದೆ.

**ಬೇಕಾದ ದಾಖಲೆಗಳು:** ಅಭ್ಯರ್ಥಿಯ ಹೆಸರು, ಆಧಾರ್ ಕಾರ್ಡ್ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆ, ವಿದ್ಯಾರ್ಹತೆಯ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ದೈಹಿಕಾ ಕ್ಷಮತಾ ಪತ್ರ, ಇತ್ತೀಚಿ ನಾಲ್ಕು ಭಾವಚಿತ್ರ, ಈ ಮೊದಲು ಶಿಶಿಕ್ಷು ತರಬೇತಿ ಪಡೆದಿದ್ದಲ್ಲಿ ದಾಖಲೆಯ ವಿವರದ ಪ್ರತಿ ಒದಗಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕುಡತಿನಿಯ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರ ಕಚೇರಿಗೆ ಸಂಪರ್ಕಿಸಿ.

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**19–09–2024 –ಗುರುವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉ.ಭಾ/ರೇವತಿ |
| ಯೋಗ | : ವೃದ್ಧಿ |
| ಕರಣ | : ಕರಣ |
| ಸೂರ್ಯೋದಯ | : 06:15:51 |
| ಸೂರ್ಯಾಸ್ತ | : 18:24:55 |
| ರಾಹು ಕಾಲ | : 13:52–15:23 |
| ಯಮಘಂಡ ಕಾಲ | : 06:16–07:47 |
| ಗುಳಿಕ ಕಾಲ | : 09:18–10:49 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 18–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.00 ಅಡಿ |
| ಒಳ ಹರಿವು | 10556 ಕ್ಯುಸೆಕ್ |
| ಹೊರ ಹರಿವು | 10136 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.773 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1620.99 ಅಡಿ |
| ಒಳ ಹರಿವು | 1749 ಕ್ಯುಸೆಕ್ |
| ಹೊರ ಹರಿವು | 9937 ಕ್ಯುಸೆಕ್ |
| ಸಾಮರ್ಥ್ಯ | 64.140 ಟಿಎಂಸಿ |

# ಡ್ರಗ್ ಬೇರುಗಳನ್ನೇ ಕತ್ತರಿಸಿ

### ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ । ಮಾದಕ ದ್ರವ್ಯ ಹಾವಳಿ ನಿಯಂತ್ರಣಕ್ಕೆ ಕ್ರಮ
### ಮಾದಕ ವಸ್ತು ಮಾರಾಟ, ಸರಬರಾಜು ಕಡಿವಾಣಕ್ಕೆ ಪೊಲೀಸ್ ಇಲಾಖೆಗೆ ಸೂಚನೆ




■ **ಹಂಪಿ ಟೈಮ್ಸ್ ಬೆಂಗಳೂರು**
ಇಂದು ಮಾದಕ ವಸ್ತು ನಿಯಂತ್ರಣ ಕುರಿತು ಸಚಿವರು ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಯಿತು.

ಸರ್ಕಾರವು ಮಾದಕ ವಸ್ತುಗಳ ಹಾವಳಿಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ಇದರ ವಿರುದ್ಧದ ಕಾಯ್ದೆಗಳಿಗೆ ಸೂಕ್ತ ತಿದ್ದುಪಡಿ ತಂದು ಕಾನೂನು ಬಲಪಡಿಸುವ ಕುರಿತು ಪರಿಶೀಲಿಸುವಂತೆ ಸೂಚಿಸಲಾಗಿದೆ. ಮಾದಕ ವಸ್ತುಗಳ ಪೆಡ್ಲರ್‌ಗಳಿಗೆ ಕಠಿಣ ಶಿಕ್ಷೆ ವಿಧಿಸಲು ಅವಕಾಶ ಸೇರಿದಂತೆ ಕಾಯ್ದೆಯನ್ನು ಇನ್ನಷ್ಟು ಬಲಪಡಿಸಲು ನಿರ್ಧಾರ. ಕಾನೂನು ಕಾರ್ಯದರ್ಶಿ ಮತ್ತು ಅಡ್ವೊಕೇಟ್ ಜನರಲ್ ಅವರೊಂದಿಗೆ ಚರ್ಚಿಸಿ ಈ ಕುರಿತು ಅಂತಿಮ ರೂಪುರೇಷೆ ನಿಗದಿ ಪಡಿಸುವಂತೆ ಸೂಚಿಸಿದರು.

ಮಾದಕ ವಸ್ತುಗಳ ಹಾವಳಿ ಸಂಪೂರ್ಣ ಮಟ್ಟ ಹಾಕಲು ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ರಚಿಸಲಾಗುವುದು. ರಾಜ್ಯದಲ್ಲಿ ಮಾದಕ ವಸ್ತುಗಳ ಹಾವಳಿಯನ್ನು ನಿಯಂತ್ರಿಸುವ ಕಾರ್ಯದ ಸಂಪೂರ್ಣ ಮೇಲುಸ್ತುವಾರಿಯನ್ನು ಟಾಸ್ಕ್‌ಫೋರ್ಸ್ ನಿರ್ವಹಿಸಲಿದೆ.

ಪೊಲೀಸ್ ಇಲಾಖೆಗೆ ಮಾದಕ ವಸ್ತುಗಳ ಮಾರಾಟ, ಸರಬರಾಜು ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಮಾದಕ ವಸ್ತುಗಳ ಹಾವಳಿ ಹೆಚ್ಚಾಗಿರುವ ಸೂಕ್ಷ್ಮ ಪೊಲೀಸ್ ಠಾಣಾ ವ್ಯಾಪ್ತಿಗಳನ್ನು ಗುರುತಿಸಿ, ಅಂತಹ ಕಡೆ ಮಾದಕ ವಸ್ತುಗಳ ನಿಯಂಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ತಪ್ಪಿದಲ್ಲಿ ಆಯಾ ಠಾಣೆಯ ಇನ್ಸ್‌ಪೆಕ್ಟರ್‌ಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ಶಾಲೆ, ಕಾಲೇಜುಗಳಲ್ಲಿ, ವಸತಿ ಶಾಲೆಗಳಲ್ಲಿ ಈ ಕುರಿತು ಹೆಚ್ಚಿನ ನಿಗಾ ವಹಿಸಲು ಸ್ಟೂಡೆಂಟ್ ಪೊಲೀಸಿಂಗ್ ವ್ಯವಸ್ಥೆ ಜಾರಿಗೆ ತರಲಾಗುವುದು. ಎನ್‌ಸಿಸಿ, ಎನ್‌ಎಸ್‌ಎಸ್ ಘಟಕಗಳನ್ನು ಈ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.

ಔಷಧಿ ಮಳಿಗೆಗಳಲ್ಲಿ ಅನಧಿಕೃತವಾಗಿ ಸಿಂಥೆಟಿಕ್ ಡ್ರಗ್ಸ್, ಸೈಕೋಟ್ರೋಪಿಕ್ ಸಬ್‌ಸ್ಟೆನ್ಸ್‌ಗಳ ಮಾರಾಟವನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲು ಸೂಚಿಸಲಾಯಿತು. ಇಂತಹ ಚಟುವಟಿಕೆಗಳಲ್ಲಿ ಭಾಗಿಯಾದವರ ಪರವಾನಗಿಯನ್ನು ರದ್ದುಪಡಿಸಲು ಸೂಚಿಸಲಾಯಿತು.

ಔಷಧಿ ಮಳಿಗೆಗಳ ಮೇಲೆ ನಿರಂತರ ನಿಗಾ ಇರಿಸಿ, ಆಗಿಂದಾಗ್ಗೆ ಪರಿಶೀಲನೆ ನಡೆಸುವಂತೆ ಡ್ರಗ್ಸ್ ಕಂಟ್ರೋಲ್ ಇಲಾಖೆಗೆ ಸೂಚನೆ ನೀಡಲಾಯಿತು. ಮಾದಕ ದ್ರವ್ಯ ಹಾವಳಿ ತಡೆಗೆ ಇರುವ ಜಿಲ್ಲಾ ಸಮಿತಿಗಳು ಹೆಚ್ಚು ಸಕ್ರಿಯವಾಗಿ, ಜಿಲ್ಲೆಗಳಲ್ಲಿ ಮಾದಕ ದ್ರವ್ಯ ಚಟುವಟಿಕೆಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು.

ಶಿಕ್ಷಣ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಗಳು ತಮ್ಮ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳು, ಹಾಸ್ಟೆಲುಗಳಲ್ಲಿ ನಿಯಮಿತವಾಗಿ ಜಾಗೃತಿ ಮೂಡಿಸಬೇಕು. ಮಾದಕ ವಸ್ತುಗಳನ್ನು ಸಂಪೂರ್ಣವಾಗಿ ನಿಯಂತ್ರಿಸಲು ಹಾಗೂ ಜಾಗೃತಿ ಮೂಡಿಸಲು ಪೊಲೀಸ್ ಇಲಾಖೆ, ಉನ್ನತ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕು.

ಪ್ರತಿಯೊಂದು ಇಲಾಖೆಗೆ/ಅಧಿಕಾರಿಗಳಿಗೆ ಜವಾಬ್ದಾರಿಯನ್ನು ನಿಗದಿಪಡಿಸಿ, ಕಟ್ಟುನಿಟ್ಟಿನಿಂದ ಜವಾಬ್ದಾರಿಯನ್ನು ನಿರ್ವಹಿಸಬೇಕು. ಸರಿಯಾಗಿ ಕರ್ತವ್ಯ ನಿರ್ವಹಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರಿಗೆ ಸೂಚನೆ ನೀಡಲಾಯಿತು.

ರಾಜ್ಯದಲ್ಲಿ ಮಾದಕವಸ್ತು ಹಾವಳಿಯನ್ನು ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ವಿದ್ಯಾರ್ಥಿ ಯುವ ಸಮೂಹ ಮಾದಕ ವಸ್ತುಗಳಿಗೆ ಬಲಿಯಾಗುವುದನ್ನು ತಡೆಯಲು ಎಲ್ಲಾ ಇಲಾಖೆಗಳು ಸಂಘಟಿತ ಪ್ರಯತ್ನ ಮಾಡಬೇಕು.

# ಸೆ.27 ರಂದು ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಬಳ್ಳಾರಿ**
ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ಸೆ.27 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಿರುಗುಪ್ಪದ ಪೂರ್ವ ಮೆಟ್ರಿಕ್ ಬಾಲಕರ ವಸತಿ ನಿಲಯದ ಸಭಾಂಗಣದಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.
ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ. ಕಾರ್ಮಿಕರು, ಪಿಂಚಣಿದಾರರು, ಉದ್ಯೋಗದಾತರು ಸೆ.27 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ; ಅರ್ಜಿ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**
ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ, ಪ್ರಸಕ್ತ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ," "ಶುಲ್ಕ ಮರುಪಾವತಿ" ವಿದ್ಯಾಸಿರಿ–ಊಟ ಮತ್ತು ವಸತಿ ಸಹಾಯ ಯೋಜನೆ" ಸೌಲಭ್ಯಕ್ಕಾಗಿ ಈಗಾಗಲೇ ಆನ್ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಅಕ್ಟೋಬರ್ 15ರ ವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎ.ಕೆ.ಜಲಾಲಪ್ಪ ಅವರು ತಿಳಿಸಿದ್ದಾರೆ.
ಆಸಕ್ತ ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ವೆಬ್‌ಸೈಟ್ https://ssp.postmatric.karnataka.gov.in/ ಲಿಂಕ್ ಮುಖಾಂತರ ಅರ್ಜಿ ಸಲ್ಲಿಸಬಹುದು.
ಅರ್ಜಿ ಸಲ್ಲಿಸುವ ದಿನಾಂಕವನ್ನು ವಿಸ್ತರಿಸುವಂತೆ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಣ ಸಂಸ್ಥೆಗಳು ಮನವಿ ಸಲ್ಲಿಸಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ಸಂಖ್ಯೆ 8050770005 ಅಥವಾ ಇ–ಮೇಲ್ bcwdhelpline@gmail.com ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಕಲೆ, ವಾಸ್ತುಶಿಲ್ಪಕ್ಕೆ ವಿಶ್ವಕರ್ಮರ ಕೊಡುಗೆ

### ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿಕೆ । ಶ್ರೀ ವಿಶ್ವಕರ್ಮ ಜಯಂತಿ ಆಚರಣೆ



■ **ಹಂಪಿ ಟೈಮ್ಸ್ ಕೊಪ್ಪಳ**
ಸೃಜನಶೀಲ ವಿಚಾರಧಾರೆಯುಳ್ಳವರಾಗಿದ್ದ ಶ್ರೀ ವಿಶ್ವಕರ್ಮ ಕೈಗೊಂಡ ಕಾರ್ಯಗಳು ಸ್ಮರಣೀಯವಾಗಿವೆ ಎಂದು ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಹೇಳಿದರು.
ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ನಗರದ ಸಾಹಿತ್ಯ ಭವನದಲ್ಲಿ ಸೆಪ್ಟೆಂಬರ್ 18 ರಂದು ಆಯೋಜಿಸಿದ್ದ ಶ್ರೀ ವಿಶ್ವಕರ್ಮ ಜಯಂತಿ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.
ವಿಶ್ವಕರ್ಮ ಸಮಾಜಕ್ಕೆ ದೈವಶಕ್ತಿ ಇರುವ ಕಾರಣ ಸಕಲ ಕಲೆಗಳನ್ನು ಕರಗತ ಮಾಡಿಕೊಂಡು ಸಮಾಜದಲ್ಲಿ ಸ್ಮರಣಿಯ ಸೇವೆಯಲ್ಲಿ ತೊಡಗಿದ್ದಾರೆ. ವಿಶ್ವಕರ್ಮ ಸಮಾಜವು ನಿರ್ಮಿಸಿದ ಶಿಲ್ಪಕಲೆಯು ಶ್ರೀಮಂತಿಕೆಯಿಂದ ಕೂಡಿದೆ ಎಂದರು.
ಕುಲಕಸುಬುದಾರರಿಗೆ ತರಬೇತಿ ಕಾರ್ಯಕ್ರಮ, ತರಬೇತಿ ಭತ್ಯೆ, ಸಾಲ ಮತ್ತು ಸಹಾಯಧನ ಹೀಗೆ ಹಲವಾರು ಸೌಲಭ್ಯಗಳಿದ್ದು, ಇವುಗಳ ಸದುಪಯೋಗ ಪಡೆದು ಅಭಿವೃದ್ಧಿ ಹೊಂದಬೇಕು ಎಂದು ತಿಳಿಸಿದರು.
ವೀರಶೇಖರ ಬಿ. ಪತ್ತಾರ ಅವರು ಉಪನ್ಯಾಸ ನೀಡಿ, ಶ್ರೀ ವಿಶ್ವಕರ್ಮ ಅವರು ನಿರಾಕಾರ, ನಿರ್ಗುಣ,ಅನಂತ,ಚೈತನ್ಯರೂಪಿಯಾಗಿದ್ದರು. ದೇವರ ದೇವರೇ ಆಗಿದ್ದರು ಎಂದರು
ಜಿಲ್ಲಾ ವಿಶ್ವಕರ್ಮ ಸಮಾಜದ ಗೌರವಾಧ್ಯಕ್ಷ ಈಶಪ್ಪ ಬಡಿಗೇರ್ ಅವರು ಪ್ರಾಸ್ತಾವಿಕ ಮಾತನಾಡಿ, ವಿಶ್ವಕರ್ಮ ಸಮಾಜದ ಉದ್ದಾರಕ್ಕೆ ಶಿಕ್ಷಣದ ಅವಶ್ಯಕತೆ ಇದೆ ಎಂದು ತಿಳಿಸಿದರು. ತ್ರಿಮೂರ್ತಿಗಳು ಹುಟ್ಟದೇ ಇರುವಂತಹ ಸಂದರ್ಭದಲ್ಲಿ ಜಗತ್ತನ್ನು ಸೃಷ್ಠಿಸಿ, ಜಗತ್ತಿಗೆ ಕತೃತ್ವ ಮತ್ತು ಕರ್ತವ್ಯಗಳ ಬಗ್ಗೆ ವಿಶ್ವಕರ್ಮ ಅವರು ತಿಳಿಸಿಕೊಟ್ಟರು. ಈ ಮಾತು ಪುರಾಣ, ವೇದಗಳಲ್ಲಿದೆ. ವಿಶ್ವಕರ್ಮ ಸಕಲ ಚೈತನ್ಯವನ್ನು ಸೃಷ್ಠಿ ಮಾಡಿದರು. ಇಡೀ ಪ್ರಪಂಚಕ್ಕೆ ಬೆಳಕು ನೀಡಿದವರು ವಿಶ್ವಕರ್ಮರಾಗಿದ್ದು, ಇದು ಋಗ್ವೇದಲ್ಲಿ ಕೂಡ ತಿಳಿಸಲಾಗಿದೆ ಎಂದರು.
ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ನಾಗೇಶ ಕುಮಾರ್ ಮಾತನಾಡಿ, ವಿಶ್ವಕರ್ಮ ಸಮಾಜವು ಜಗತ್ತಿಗೆ ಅದ್ಭುತ ಕಲೆ ನೀಡಿದ ಸಮಾಜವಾಗಿದೆ. ಜಿಲ್ಲಾಡಳಿತ ನಮ್ಮ ಕಲೆಗೆ ಬೇಕಾದ ಸೌಲಭ್ಯ ಒದಗಿಸುವಂತಾಗಲಿ.
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ಕೊಪ್ಪಳ ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ದೇವಪ್ಪ ಬಡಿಗೇರ, ಉಪಾಧ್ಯಕ್ಷ ಮಹಾದೇವಪ್ಪ ಕಮ್ಮಾರ ಮತ್ತು ರಾಮಣ್ಣ, ಕಾರಟಗಿ ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಸೂಗೂರೇಶ್ವರ, ಕನಕಗಿರಿ ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಮಂಜುನಾಥ ಪಂಡಿತ, ಕೂಕನೂರ ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ದೇವೇಂದ್ರಪ್ಪ ಬಡಿಗೇರ್ ಮತ್ತು ವಿಶ್ವಕರ್ಮ ಸಮಾಜದ ಭಾಂದವರು ಉಪಸ್ಥಿತರಿದ್ದರು.

# ಜಿಲ್ಲಾ, ತಾಲ್ಲೂಕು ದಸರಾ ಕ್ರೀಡಾಕೂಟ ಆಯೋಜನೆ

■ **ಹಂಪಿ ಟೈಮ್ಸ್ ಬಳ್ಳಾರಿ**
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನ ಜಿಲ್ಲಾ ಹಾಗೂ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ಕೆ.ಗ್ರೇಸಿ ಅವರು ತಿಳಿಸಿದ್ದಾರೆ.
**ಜಿಲ್ಲಾ ಮಟ್ಟ:** ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟವನ್ನು ಸೆ.26 ರಂದು ಜಿಲ್ಲಾ ಕ್ರೀಡಾಂಗಣ ಮತ್ತು ಬಿಡಿಎಎ ಫುಟ್‌ಬಾಲ್ ಮೈದಾನದಲ್ಲಿ ಆಯೋಜಿಸಲಾಗಿದೆ.
**ತಾಲ್ಲೂಕು ಮಟ್ಟ:** ಕಂಪ್ಲಿಯ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಸೆ.20 ರಂದು ಬೆಳಿಗ್ಗೆ 10.30 ಗಂಟೆಗೆ ಏರ್ಪಡಿಸಲಾಗಿದೆ.
ಕುರುಗೋಡಿನ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನಲ್ಲಿ ಸೆ.21 ರಂದು ಬೆಳಿಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.
ಸಿರುಗುಪ್ಪದ ತಾಲ್ಲೂಕು ಕ್ರೀಡಾಂಗಣದಲ್ಲಿ ಸೆ.23 ರಂದು ಬೆಳಿಗ್ಗೆ 10.30 ಗಂಟೆಗೆ ಏರ್ಪಡಿಸಲಾಗಿದೆ.
ಸಂಡೂರಿನ ತಾಲ್ಲೂಕು ಕ್ರೀಡಾಂಗಣದಲ್ಲಿ ಸೆ.24 ರಂದು ಬೆಳಿಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಬಳ್ಳಾರಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಸೆ.25 ರಂದು ಬೆಳಿಗ್ಗೆ 10.30 ಗಂಟೆಗೆ ಏರ್ಪಡಿಸಲಾಗಿದೆ.
**ನಿರ್ದೇಶನಗಳು:** ಕ್ರೀಡಾಕೂಟದಲ್ಲಿ ಆಯಾ ತಾಲ್ಲೂಕಿನ ಪುರಷ ಮತ್ತು ಮಹಿಳಾ ಕ್ರೀಡಾಪಟುಗಳು ಅಥ್ಲೆಟಿಕ್ಸ್, ವಾಲಿಬಾಲ್, ಕಬಡ್ಡಿ, ಖೋ–ಖೋ, ಫುಟ್ಬಾಲ್(ಪುರಷರಿಗೆ ಮಾತ್ರ), ಥ್ರೋಬಾಲ್, ಯೋಗ ಕ್ರೀಡೆಗಳಲ್ಲಿ ಭಾಗವಹಿಸಬಹುದು.
ಒಬ್ಬ ಕ್ರೀಡಾಪಟು ಅಥವಾ ತಂಡ ಯಾವುದೇ ತಾಲ್ಲೂಕು ಮಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿಸಿದ ನಂತರ ಬೇರೆ ಯಾವುದೇ ತಾಲ್ಲೂಕು ಅಥವಾ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಅವಕಾಶ ವಿಲ್ಲ. ಅಂತಹ ಪ್ರಕರಣವೇನಾದರೂ ದಾಖಲಾದಲ್ಲಿ, ಆಕ್ಷೇಪಣೆಯಾದಲ್ಲಿ ಅಥವಾ ಗಮನಕ್ಕೆ ಬಂದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.
ಆಯಾ ತಾಲ್ಲೂಕಿನಲ್ಲಿ ವಾಸಿಸುವ ಕ್ರೀಡಾಪಟುಗಳಿಗೆ ಮಾತ್ರ ಭಾಗವಹಿಸಲು ಅರ್ಹರಿದ್ದು, ಕ್ರೀಡಾ ಕೂಟದಲ್ಲಿ ರಕ್ಷಣಾ ಪಡೆ, ಅರೆ ರಕ್ಷಣಾ ಪಡೆ ಸೇರಿದ ಕ್ರೀಡಾಪಟುಗಳು ಭಾಗವಹಿಸುವಂತಿಲ್ಲ.
ಸೆ.26 ರಂದು ಜಿಲ್ಲಾ ಕ್ರೀಡಾಂಗಣ ಮತ್ತು ಬಿಡಿಎಎ ಫುಟ್ಬಾಲ್ ಮೈದಾನದಲ್ಲಿ ನಡೆಯುವ ಜಿಲ್ಲಾ ಮಟ್ಟದ ದಸರಾ ಕ್ರೀಡಾ ಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳಿಗೆ ಮಾತ್ರ ಪ್ರಯಾಣ ಭತ್ಯೆಯನ್ನು ಕೆ2 ಮೂಲಕ ಜಮೆ ಮಾಡಲಾಗುವುದು(ಬ್ಯಾಂಕ್ ವಿವರ ಕಡ್ಡಾಯವಾಗಿ ಒದಗಿಸಬೇಕು).
ಹೆಚ್ಚಿನ ವಿವರಗಳಿಗಾಗಿ ಹಾಕಿ ತರಬೇತುದಾರ ಎಂ.ಜಾಕೀರ್ ಮೊ: 9036335986, ಅಥ್ಲೆಟಿಕ್ ತರಬೇತುದಾರೆ ರೋಹಿಣಿರ್‍ವತ್‌ಕರ್, ಮೊ: 8217324522, ಬ್ಯಾಡ್ಮಿಂಟನ್ ತರಬೇತುದಾರ ಜಿ.ರವಿ ಮೊ:9739852460, ಫುಟ್ಬಾಲ್ ತರಬೇತುದಾರರು ಮಹ್ಮದ್ ಮಸೂದ್ ಮೊ:9886688858, ಬಾಸ್ಕೆಟ್ ಬಾಲ್ ತರಬೇತುದಾರ ನಿಸಾರ್ ಅಹ್ಮದ್ ಮೊ:8088380909 ಗೆ ಸಂಪರ್ಕಿಸಿ

**SSLC** ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ
Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

## Dr. B. R. Ambedkar

Most important 2 marks questions and answers

**1.What made Nehru choose Ambedkar as the law Minister?**
**Ans:** Ambedkar had a great skill in Law and Legislation. He had the vision of social justice -a vision which has sought to be the law minister of India.

**2.How did Ambedkar and Gandhi try to wipe out caste system from India?**
**Ans:** Gandhi reminded the duty of higher caste towards the depressed classes. Ambedkar reminded the depressed classes of their inherent rights to equality with the higher caste

**3.What qualities do you appreciate in Dr. B.R. Ambedkar?**
**Ans:** I appreciate the reading and thirst for knowledge in dr. B.R. Ambedkar. He had the rare gifts like unraveling the most complicated legal concepts. He also had tactfulness, frankness and patience. We should also appreciate his social concern for depressed class.

**4.How can you say that Ambedkar has a great thirst for books? Or Ambedkar was a voracious reader justify**
**Ans:** Dr. Ambedkar was a voracious reader. He bought books by curtailing his daily needs. When he was in new-York, He purchased 2000 books. He bought so many books from London and sent them to India in 32 boxes.

**5.How did 14th amendment to the US constitution influence Ambedkar?**
**Ans:** When dr. B R Ambedkar was in USA the 14th amendment to the USA gave freedom to the black Americans. The influenced him very much. He saw the parallel of the situation for the depressed class in India.

**6.Why did Nehru describe Dr. Ambedkar as a symbol of revolt?**
**Ans:** Dr. B.R. Ambedkar had proved his perseverance, persistence and virulence against certain things very seriously. He had created awareness among the people about Samata in the society

**7.Write a short note on Dr.Ambedkar's idea of the three pillars of the State ?**
**Ans:** Three pillars of the state are- the legislature , the executive, the judiciary. Dr. Ambedkar says that the jurisdiction of each should be clear and untrammeled. He had the sense of importance of the role of the citizens.

**8.Ambedkar described the methods of civil disobedience Non-Cooperation And satyagraha As the 'Grammar of Anarchy'?**
**Ans:** According to the Ambadkar methods of civil disobedience, non-co Operation and Satyagraha are necessary In a state which is ruled by foreigners. But in a democratic country these methods should not be used if used there would be loss of lives and public property

**Most important Extracts (3 Marks)**

**1. " He ahd an insatiable thirst for books"**
**a) Who said these words?**
**Ans:** R.Venkatraman
**b) Who had insatiable thirst?**
**Ans:** Dr. B.R.Ambedkar
**c) What was thirst?**
**Ans:** Reading books

**2. "They bought about a variable revolution in Social thought"**
**a) Who does 'they' refer to?**
**Ans:** They refers to Mahatma Gandhi and BR Ambedkar.
**b) What revolution is referred to?**
**Ans:** The caste discrimination system.
**c) What was their social thought?**
**Ans:** There should not be in any caste discrimination, there must be equality.

Prepared by : **Vanitha HM.** English Teacher, G.B.Govt Junior college H.B.Halli. Vijayangara Dist

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055